ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ

Raichur, Koppal, Yadagiri, Kalburgi, Ballary, Vijaya Nagar, Bidar

ಕನ್ನಡ ಮಾತೃ ಭೂಮಿ

ರಾಯಚೂರನಿಂದ ರಾಜ್ಯದವರೆಗೆ

ಕನ್ನಡದಿನ ಪತ್ರಿಕೆ

KANNADA MATHRUBHOOMI

KANNADA DAILY PAPER

ಸಂಪಾಕದರು : ಶ್ಯಾಮ್ ಸುಂದರ್.ಎಲ್

EDITOR : SHYAM SUNDER L

mathrubhoomircr@gmail.com

Call : 9886635117

ಸಂಪುಟ : Volume : 03 ಸಂಚಿಕೆ Issuse : 170 ದಿನಾಂಕ : 20-04-2026 Date : 20-04-2026 ಸೋಮವಾರ Monday

RNI: Karkan/2023/89199

Post Reg No.: RCR/L/RNP/98/2025-2027

ರಾಯಚೂರು Raichur ಪುಟ : Pages : 04 ರೂ Rs. 2

# ತಮಿಳುನಾಡು: ಪಟಾಕಿ ಕಾರ್ಖಾನೆಯಲ್ಲಿ ಭಾರಿ ಸ್ಫೋಟ, 18 ಮಂದಿ ಸಾವು

**ವಿರುಧ್‌ನಗರ(ತಮಿಳುನಾಡು),ಏ.19-**ಪಟಾಕಿ ಕಾರ್ಖಾನೆಯಲ್ಲಿ ಭಾರಿ ಸ್ಫೋಟ ಸಂಭವಿಸಿ 18 ಜನರು ಸಾವನ್ನಪ್ಪಿರುವ ಘಟನೆ ವಿರುಧ್‌ನಗರದ ಕಟ್ಟನಾರಪಟ್ಟಿ ಎಂಬಲ್ಲಿ ಇಂದು ಮಧ್ಯಾಹ್ನ ನಡೆದಿದೆ.

ದುರಂತದಲ್ಲಿ ಗಂಭೀರವಾಗಿ ಗಾಯಗೊಂಡ 6 ಮಂದಿಯನ್ನು ಆಸ್ಪತ್ರೆಗೆ ರವಾನಿಸಲಾಗಿದೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಲು ಕಾರ್ಯಾಚರಣೆ ನಡೆಸುತ್ತಿದ್ದಾರೆ.

10 ಕಿ.ಮೀ ದೂರದವರೆಗೂ ಕಂಪನದ ಅನುಭವ!: ಸ್ಫೋಟದ ತೀವ್ರತೆಗೆ ಕಾರ್ಖಾನೆಯ 4 ಕೊಠಡಿಗಳು ಸಂಪೂರ್ಣವಾಗಿ ಛಿದ್ರಗೊಂಡಿವೆ. ಸುಮಾರು 10 ಕಿಲೋ ಮೀಟರ್ ದೂರದವರೆಗೂ ಕಂಪನದ ಅನುಭವವಾಗಿದೆ ಎಂದು ಜನರು ತಿಳಿಸಿದ್ದಾರೆ.

ಘಟನೆಗೆ ತೀವ್ರ ಬೇಸರ ವ್ಯಕ್ತಪಡಿಸಿರುವ ಮುಖ್ಯ ಮಂತ್ರಿ ಎಂ.ಕೆ.ಸ್ಟಾಲಿನ್ ಎಕ್ಸ್ ಪೋಸ್ಟ್ ಮಾಡಿ, ವಿರುಧ್ ನಗರ ಜಿಲ್ಲೆಯ ಕಟ್ಟನಾರಪಟ್ಟಿಯಲ್ಲಿ ಸಂಭವಿಸಿದ → 4

# ತಮಿಳನಾಡು ಚುನಾವಣೆ : ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲುವಿಗಾಗಿ ಎ.ವಸಂತಕುಮಾರ ಭರ್ಜರಿ ಪ್ರಚಾರ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-** ತಮಿಳುನಾಡು ವಿಧಾನಸಭೆ ಚುನಾವಣೆಯ ಉಸಿಲಂಪಟ್ಟಿ ಕ್ಷೇತ್ರದ ಎಐಸಿಸಿ ಚುನಾವಣಾ ವೀಕ್ಷಕರಾಗಿ ನೇಮಕಗೊಂಡ ಎಂಎಲ್‌ಸಿ ಎ.ವಸಂತ ಕುಮಾರ್ ಅವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ಗೆಲುವಿಗಾಗಿ ಕ್ಷೇತ್ರದ ಪ್ರತಿ ಹಳ್ಳಿ ಹಳ್ಳಿಗೂ ಬೇಟಿ ನೀಡಿ ಪಕ್ಷದ ಕಾರ್ಯಕರ್ತರನ್ನು ಉರಿದುಂಬಿಸಿ ಅಭ್ಯರ್ಥಿ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ.

ಇಂದು ಬೆಳಗಿನ ಸಮಯದ ಪ್ರಚಾರದಲ್ಲಿ ಉಸಿಲಂಪಟ್ಟಿಯ ಪಟ್ಟಣದ ಪ್ರತಿಯೊಂದು ಅಂಗಡಿ ಗಳಿಗೆ ತೆರಳಿ ಕೈ ಅಭ್ಯರ್ಥಿ ಪರ ಮತಯಾಚಿಸಿದರು. ತದನಂತರ ಕೇರಿಪಟ್ಟಿ ಗ್ರಾಮ, ಚಿನ್ನಪಾಲರಹಟ್ಟಿ → 4

# ನಾಪತ್ತೆಯಾಗಿದ್ದ ಮನ್ಸಲಾಪುರು ವ್ಯಕ್ತಿ ಕಲ್ಲೂರು ಬಳಿ ರಸ್ತೆ ಅಪಘಾತದಲ್ಲಿ ಸಾವು

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-**ಕಳೆದ 15 ದಿನಗಳ ಹಿಂದೆ ನಾಪತ್ತೆಯಾಗಿದ್ದ ವ್ಯಕ್ತಿ, ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ತಾಲೂಕಿನ ಕಲ್ಲೂರು ಗ್ರಾಮದ ಸಮೀಪದಲ್ಲಿ ನಡೆದಿದೆ. ಮೃತ ವ್ಯಕ್ತಿ ಮನ್ಸಲಾಪೂರ ಗ್ರಾಮದ ಮಹೇಶ (35) ವರ್ಷ ಎಂದು ತಿಳಿದು ಬಂದಿದೆ. ಮೃತಪಟ್ಟಿರುವ ಮಹೇಶ ಕಳೆದ 15 ದಿನಗಳ ಹಿಂದೆಯೇ ಕಾಣೆಯಾಗಿ ದ್ದು, ಮೃತರ ಕುಟುಂಬಸ್ಥರು ಎಲ್ಲಕಡೆಗೂ ಹುಡುಕಾಟ ನಡೆಸಲಾಗಿದೆ, ಕಂಡು ಬಾರದ ಹಿನ್ನೆಲೆಯಲ್ಲಿ ಗ್ರಾಮೀಣ ಠಾಣೆಯಲ್ಲಿ ದೂರು ನೀಡಲಾಗಿದೆ ಎಂದು ತಿಳಿದು ಬಂದಿದೆ.

ಮೃತ ಮಹೇಶ ನಿನ್ನೆ ಕಲ್ಲೂರು ಗ್ರಾಮದ ಸಮೀಪ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದು, ವಾರಸುದಾರರಿಗೆ ಮಾಹಿತಿ ನೀಡಿದ್ದರು. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ಜರುಗಿದೆ.

## ಗೋವಿಂದರಾವ್ ಸಮಿತಿ ಶಿಫಾರಸ್ಸು: ಸಾಧ್ಯತೆ, ಬಾಧ್ಯತೆ ಕುರಿತು ವಿಚಾರ ಸಂಕಿರಣ

# 40ಜನ ಶಾಸಕರು ಪಕ್ಷಾತೀತವಾಗಿ ಧ್ವನಿಯೆತ್ತಬೇಕಾದ ಅವಶ್ಯಕತೆ-ದದ್ದಲ್



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-**ಹೈದ್ರಾಬಾದ್ ಕರ್ನಾಟಕ ಪ್ರದೇಶವು ಮೊದಲಿನಿಂದಲೂ ಹಿಂದುಳಿದ ಭಾಗವೆಂದು ಕರೆಯಲಾಗುತ್ತಿದ್ದು, ಈಗಲೂ ಯಾವುದೇ ಬದಲಾವಣೆ ಕಂಡಿಲ್ಲ. ಈ ಭಾಗದ ಜಿಲ್ಲೆಗಳ ಅಭಿವೃದ್ಧಿಗೆ ಸರ್ಕಾರವನ್ನು ಪ್ರಶ್ನಿಸುವ ಜವಾಬ್ದಾರಿ ಈ ಭಾಗದ 41 ಕ್ಷೇತ್ರ ಶಾಸಕರದ್ದಾಗಿದೆ. ಶಾಸಕರಾದ ನಾವೆಲ್ಲರೂ ಧ್ವನಿ ಎತ್ತುವುದು ಬಹಳ ಮುಖ್ಯವಾಗಿದೆ ಎಂದು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಹೇಳಿದರು.

ಅವರಿಂದು ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಭಾಂಗಣದಲ್ಲಿ ಹೈದ್ರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರದಿಂದ ಹಮ್ಮಿಕೊಂಡಿದ್ದ ಪ್ರಾದೇಶಿಕ ಅಸಮತೋಲನೆ, ಗೋವಿಂದರಾವ್ ಸಮಿತಿ ವರದಿಯ ಸಾಧ್ಯತೆ, ಬಾಧ್ಯತೆಗಳ ಕುರಿತು ವಿಚಾರ ಸಂಕಿರಣವನ್ನು ಉದ್ದೇಶಿಸಿ ಮಾತನಾಡಿದರು.

ಹೈದ್ರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳ ಅಭಿವೃದ್ಧಿಗೆ ಈ ಭಾಗದ 41 ಕ್ಷೇತ್ರಗಳ ಶಾಸಕರು ಒಟ್ಟು ಗೂಡುವುದು ಅತ್ಯಂತ ಅವಶ್ಯಕವಾಗಿದ್ದು, ಪ್ರತಿಯೊಬ್ಬ ಶಾಸಕರೂ ಕೂಡ ಪಕ್ಷಾತೀತವಾಗಿ ತಮ್ಮ ತಮ್ಮ ಪಕ್ಷದ ನಾಯಕರಿಗೆ ಈ ಭಾಗದ ಹಿಂದುಳುವಿಕೆ ಕುರಿತು ಮಾಹಿತಿಯನ್ನು ಮುಟ್ಟಿಸಬೇಕಾಗಿದೆ. 371 ಜೆ ವಿಶೇಷ ಕಾನೂನಿನ್ವಯ ವಿಶೇಷ ಮೀಸಲಾತಿ ಪಡೆದರೂ ಅಭಿವೃದ್ಧಿ ಮಾತ್ರ ಶೂನ್ಯವಾಗಿದೆ. ಅದಕ್ಕಾಗಿ ಚಿಂತನೆ ಮಾಡುವ ಅಗತ್ಯತೆ ಇದೆ ಎಂದರು.

ಪ್ರಾದೇಶಿಕ ಅಸಮತೋಲನೆ ನಿವಾರಣೆಗಾಗಿ 20-22 ವರ್ಷಗಳ ಹಿಂದೆ ನಂಜುಂಡಪ್ಪ ವರದಿಯನ್ನು ನೀಡಲಾಗಿತ್ತು. ಆದರೆ ಈವರೆಗೂ ಅದೇ ವರದಿಯಾನುಸಾರ ಕಾರ್ಯಗಳಾಗುತ್ತಿವೆ. ಇದೀಗ ರಾಜ್ಯ ಸರ್ಕಾರ ಇದಕ್ಕಾಗಿ ಗೋವಿಂದ ರಾವ್ ಸಮಿತಿಯನ್ನು ರಚಿಸಿದ್ದು, ಈ ಭಾಗದ ಸಮಸ್ಯೆಗಳ ಕುರಿತು ಹಾಗೂ ಸಮಸ್ಯೆಗಳ ಪರಿಹಾರಕ್ಕೆ ಮತ್ತು ಭಾಗದ ಅಭಿವೃದ್ಧಿಗೆ ಬೇಕಾಗಿರುವ ಸಿದ್ದತೆಗಳ ಕುರಿತು ಚಿಂತನೆ ಮಾಡಲು ವಿಚಾರ ಸಂಕಿರಣವನ್ನು ಏರ್ಪಡಿಸಿರುವುದು ಅತ್ಯಂತ ಮಹತ್ವದ ಕಾರ್ಯವಾಗಿದೆ ಎಂದರು.

ಪ್ರಸುತ್ತ ರಾಜಕೀಯವೂ ಉದ್ಯಮಿಗಳ ಕೈಗೆ ಸಿಲುಕಿದ್ದು, ವಿಧಾನ ಸಭೆಯಲ್ಲಿ ಸತ್ಯದ ಮತ್ತು ವಾಸ್ತವಿಕ ಸ್ಥಿತಿಗಳ ಬಗ್ಗೆ ಮಾತನಾಡಲೂ ಕೂಡ ಹಲವು ಶಾಸಕರಿಗೆ ಅವಕಾಶಗಳನ್ನು ನೀಡುತ್ತಿಲ್ಲ. ಕೇಂದ್ರದಿಂದ ಮಹತ್ವಾಕಾಂಕ್ಷೆ ಜಿಲ್ಲೆಯೆಂದು ಘೋಷಣೆಯಾಗಿದೆ ಹೊರತು ಅದರಿಂದ ಯಾವುದೇ ಬದಲಾವಣೆಗಳಾಗುತ್ತಿಲ್ಲ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪ್ರತಿ ವರ್ಷ 5 ಸಾವಿರ ಕೋಟಿ ನೀಡಲಾಗುತ್ತಿದೆ. ಅದರ ಜೊತೆಗೆ ರಾಜ್ಯ ಸರ್ಕಾರವೂ ಪ್ರತ್ಯೇಕವಾದ ಅಭಿವೃದ್ಧಿ ಅನುದಾನ ನೀಡಬೇಕಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರದೊಂದಿಗೆ ಚರ್ಚಿಸಲಾಗುತ್ತದೆ ಎಂದರು.

ಇದಕ್ಕೂ ಮೊದಲು ರಾಘವೇಂದ್ರ ಕುಷ್ಟಗಿ ಪ್ರಾಸ್ತಾವಿಕವಾಗಿ ಮಾತನಾಡಿ, ಹೈದ್ರಾಬಾದ್ ಕರ್ನಾಟಕ ಭಾಗವನ್ನು ಕಲ್ಯಾಣ ಕರ್ನಾಟಕ ಭಾಗವೆಂದು ಮರು ನಾಮಕರಣ ಮಾಡಲಾಗಿದೆ ಹೊರತು ಕಲ್ಯಾಣ ಕೆಲಸಗಳು ಯಾವೂ ಕೂಡ ಆಗುತ್ತಿಲ್ಲ. ಕಲ್ಯಾಣದ ಪರಿಕಲ್ಪನೆ ಹೋಗಿ ಕಾರ್ಪೋರೇಟ್, ಬಂಡವಾಳ ಶಾಹಿಗಳ ಇಚ್ಛೆಯಂತೆ ನಡೆಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಹೈದ್ರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳ ಅಭಿವೃದ್ಧಿ ಕುರಿತಂತೆ ಈ ಭಾಗದ 41 ಶಾಸಕರ ಮೌನ ಬರೀ ಮೌನವಲ್ಲ ಅದು ತಣ್ಣನೆಯ ಹಾಗೂ ಕ್ರೂರ ಮೌನವಾಗಿದೆ ಎಂದು ಹೇಳಿದರು.

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಮೈಸೂರಿನ ರಾಜ ಕಾರಣಿಗಳು, ಹೈದ್ರಾಬಾದ್ ಕರ್ನಾಟಕ ಭಾಗವನ್ನು ಧರಿದ್ರ ಭಾಗವಾಗಿದೆ. ಇವುಗಳನ್ನು ಸೇರಿಸಿಕೊಳ್ಳುವುದು ಬೇಡ ಎಂದು ವಿರೋಧಿಸಿದ್ದವು. ಅದೇ ವೇಳೆಗೆ ಇಂದಿರಾಗಾಂಧಿ ಅವರು ದೇಶದ 50 ಜಿಲ್ಲೆಗಳನ್ನು ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ಘೋಷಿಸಿದ್ದರು. ಅದರಲ್ಲಿ ರಾಯಚೂರು ಕೂಡ ಒಂದಾಗಿತ್ತು. ನಂತರ ಪ್ರೊ.ಲಲಿತ್‌ಸೇನ್ ತಂಡ ಈ ಭಾಗವನ್ನು ಗ್ರೋಥ್ ಸೆಂಟರ್ ಎಂದು ವರದಿ ನೀಡಿ ಇಲ್ಲಿ ಅಗ್ರೋ ಬೇಸ್ ಕೈಗಾರಿಕೆಗಳನ್ನು ಸ್ಥಾಪಿಸಬಹುದೆಂದು ವರದಿ ನೀಡಿತ್ತು. ಅಂದಿನಿಂದಲೂ ಜಿಲ್ಲೆಯನ್ನೂ ಕಡೆಗಣಿಸುತ್ತಾ ಬರಲಾಗುತ್ತಿದೆ ಎಂದರು.

ಈ ಭಾಗದ ಹಿಂದುಳಿತದ ಬಗ್ಗೆ ಚಿಂತನೆಯನ್ನು ಮಾಡಲು ಮತ್ತು 371ಜೆ ಹೋರಾಟಗಾರರ ಸಮಾವೇಶ ಹಾಗೂ ದುಂಡು ಮೇಜಿನ ಸಭೆ ಹಾಗೂ ಕಲ್ಯಾಣ ಕರ್ನಾಟಕವಿಕಾಸ ವೇದಿಕೆ ಸ್ಥಾಪನೆಯನ್ನು ಮೇ.24ರಂದು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಇದೇ ವೇಳೆ ವಿಷಯ ತಜ್ಞರಾಗಿ ಜಿಲ್ಲಾ ವಾಣಿಜ್ಯೋದ್ಯಮ ಸಂಘದ ಮಾಜಿ ಅಧ್ಯಕ್ಷ ತ್ರಿವಿಕ್ರಮ ಜೋಷಿ ಮಾತನಾಡಿ, ನಂಜುಂಡಪ್ಪ ವರದಿಯ ಪ್ರಕಾರ 8 ವರ್ಷದವರೆಗೆ ಆಗಿನ ರಾಜ್ಯ ಬಜೆಟ್ ಗಾತ್ರ 31ಸಾವಿರ ಕೋಟಿ ಇತ್ತು ಅದರಲ್ಲಿ 15 ಸಾವಿರ ಕೋಟಿ ಅನುದಾನವನ್ನು ರಾಜ್ಯದ 114 ಹಿಂದುಳಿದ ಪ್ರದೇಶಗಳಿಗೆ ನೀಡಬೇಕು ಎಂದಿತ್ತು. ಅದರಲ್ಲಿ 39 ಅತ್ಯಂತ ಹಿಂದುಳಿದ, 40 ಅತಿ ಹಿಂದುಳಿದ ಮತ್ತು ಬಾಕಿ ಇರುವ ತಾಲೂಕುಗಳು ಹಿಂದುಳಿದ ತಾಲೂಕುಗಳೆಂದು ತಿಳಿಸಲಾಗಿತ್ತು ಜೊತೆಗೆ ಕೃಷಿ ವಲಯದ 9 ಸೂಚ್ಯಂಕಗಳು, ಕಯಗಾರಿಕೆಗಳ 5, ಆರ್ಥಿಕ ಮೂಲಸೌಕರ್ಯದ 9, ಸಾಮಾಜಿಕ 2 ಹಾಗೂ 35 ಜನಸಂಖ್ಯೆ ಸೂಚ್ಯಂಕಗಳನ್ನು ನೀಡಿದ್ದರು. ಆದರೆ ಅವು ಅನುಷ್ಠಾನಗೊಳಿಸಲಾಗಲ್ಲ ಎಂದರು.

ಡಾ.ರಝಾಕ್ ಉಸ್ತಾದ್ ಮತನಾಡಿ, ನಂಜುಂಡಪ್ಪ ವರದಿ ಪ್ರಕಾರ ರಾಜ್ಯದ 175 ತಾಲೂಕುಗಳ ಪೈಕಿ 114 ತಾಲೂಕುಗಳು ಅತಿ ಹಿಂದುಳಿದಿದ್ದವು. ಅದರಲ್ಲಿ ಕಲ್ಯಾಣ ಕರ್ನಾಟಕ → 4

- ■ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ವಿಚಾರ ಸಂಕಿರಣ
  - ಪ್ರಾದೇಶಿಕ ಅಸಮತೋಲನೆ ಕುರಿತು ಚರ್ಚೆ
  - 371(ಜೆ) ಅನುಷ್ಠಾನದ ಸ್ಥಿತಿ
  - ಅಭಿವೃದ್ಧಿ ಸವಾಲುಗಳು
- ■ ಮುಖ್ಯ ವಿಚಾರ
  - ಹೈದ್ರಾಬಾದ್ ಕರ್ನಾಟಕ ಭಾಗ ಇನ್ನೂ ಹಿಂದುಳಿದ ಪ್ರದೇಶ
  - ಅಭಿವೃದ್ಧಿಯಲ್ಲಿ ಯಾವುದೇ ಪ್ರಮುಖ ಬದಲಾವಣೆ ಇಲ್ಲ
  - 41 ಶಾಸಕರ ಜವಾಬ್ದಾರಿ ಪ್ರಮುಖ
- ■ ಬಸನಗೌಡ ದದ್ದಲ್ ಹೇಳಿಕೆ
  - ಶಾಸಕರು ಒಟ್ಟಾಗಿ ಧ್ವನಿ ಎತ್ತಬೇಕು
  - ಪಕ್ಷಾತೀತವಾಗಿ ಸಮಸ್ಯೆಗಳನ್ನು ಮುಂದಿಡಬೇಕು
  - 371(ಜೆ) ಇದ್ದರೂ ಅಭಿವೃದ್ಧಿ ಶೂನ್ಯ
- ■ ಸಮಿತಿಗಳು ಮತ್ತು ವರದಿಗಳು
  - ನಂಜುಂಡಪ್ಪ ವರದಿ (20-22 ವರ್ಷ ಹಳೆಯದು)
  - ಇನ್ನೂ ಅದೇ ಆಧಾರದಲ್ಲಿ ಕಾರ್ಯ
  - ಹೊಸದಾಗಿ ಗೋವಿಂದರಾವ್ ಸಮಿತಿ ರಚನೆ
- ■ ರಾಜಕೀಯ ಸ್ಥಿತಿ
  - ರಾಜಕೀಯದಲ್ಲಿ ಉದ್ಯಮಿಗಳ ಪ್ರಭಾವ ಹೆಚ್ಚಾಗಿದೆ
  - ಶಾಸಕರಿಗೆ ಮಾತಿನ ಅವಕಾಶ ಕಡಿಮೆ
  - ಮಹತ್ವಾಕಾಂಕ್ಷೆ ಜಿಲ್ಲೆ ಘೋಷಣೆ ಪರಿಣಾಮ ಇಲ್ಲ
- ■ ಆರ್ಥಿಕ ವಿಷಯ
  - ಕಲ್ಯಾಣ ಕರ್ನಾಟಕ ಮಂಡಳಿಯಿಂದ ₹5000 ಕೋಟಿ ಪ್ರತಿವರ್ಷ
  - ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನ ಅಗತ್ಯ
  - ಅಭಿವೃದ್ಧಿಗೆ ಹೆಚ್ಚಿನ ಹೂಡಿಕೆ ಬೇಕು
- ■ ರಾಘವೇಂದ್ರ ಕುಷ್ಟಗಿ ಅಭಿಪ್ರಾಯ
  - ಹೆಸರು ಮಾತ್ರ ಕಲ್ಯಾಣ ಕರ್ನಾಟಕ
  - ಅಭಿವೃದ್ಧಿ ಕಾರ್ಯಗಳು ಕಾಣುತ್ತಿಲ್ಲ
  - ಶಾಸಕರ ಮೌನ ಕ್ರೂರ ಮೌನ

## ಸಿಯಾತಲಾಬ್‌ನಲ್ಲಿ ಸರ್ಕಾರಿ ಭೂಮಿಗೆ ಅನಧಿಕೃತ ಕಂಪೌಂಡ್, ಕಟ್ಟಡ ನಿರ್ಮಾಣ

# 10 ದಿನದಲ್ಲಿ ಕ್ರಮವಹಿಸದಿದ್ದರೆ ಹೊರಾಟ-ಕೆ.ಇ.ಕುಮಾರ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-**ನಗರದ ವಾರ್ಡ 31 ರಲ್ಲಿ ಬರುವ ಸರ್ವೆ 1629 ಹಾಗೂ 33/1 ರಲ್ಲಿ ಸರ್ಕಾರಿ ಭೂಮಿಯನ್ನು ಅತಿಕ್ರಮಿಸಿಕೊಂಡು ಅನಧಿಕೃತ ಕಂಪೌಂಡ್ ಹಾಗೂ ಕಟ್ಟಡಗಳನ್ನು 10 ದಿನಗಳಲ್ಲಿ ತಡೆಯದೇ ಯಿದ್ದರೆ ನಿವಾಸಿಗಳೊಂದಿಗೆ ಪ್ರತಿಭಟನೆ ನಡೆಸುವದಾಗಿ ಸಿಯಾತಲಾಬ್ ಪ್ರಗತಿಪರ ಚಿಂತರಕ ವೇದಿಕೆ ಮುಖಂಡ ಕೆ.ಇ.ಕುಮಾರ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ ಈಗಾಗಲೇ ಅನಧಿಕೃತವಾಗಿ ನಿರ್ಮಾಣ ವಾಗುತ್ತಿರುವ ಕಂಪೌಂಡ್ ನಿರ್ಮಿಸುತ್ತಿರುವ ಕುರಿತು ದೂರು ನೀಡಲಾಗಿದೆ. ಮಹಾನಗರಪಾಲಿಕೆ ಆಯುಕ್ತರು ತಮ್ಮ ವ್ಯಾಪ್ತಿಗೆ ಬರುವದಿಲ್ಲ ಎಂದು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ರಾಜಕೀಯ ಪ್ರಭಾವ ಬಳಸಿ ಸರ್ಕಾರಿ ಜಮೀನು ಅತಿಕ್ರಮಿಸಿಕೊಳ್ಳುತ್ತಿದರು ಮಹಾನಗರ ಪಾಲಿಕೆ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳು ಯಾವದೇ ಕ್ರಮಕ್ಕೆ ಮುಂದಾಗುತ್ತಿಲ್ಲ. ರಾಜಕೀಯ ಪ್ರಭಾವಕೆ ಒಳಗಾಗಿ ಸರ್ಕಾರಿ ಜಮೀನು ಅನ್ಯರ ಪಾಲಾಗಲು ಅಧಿಕಾರಿಗಳು → 4

# ಏ.20ರಂದು ಹೊಕ್ರಾಣಿ ಗ್ರಾಮದಲ್ಲಿ ಸಾಮೂಹಿಕ ಮದುವೆ, ಮತ್ತು ಆಧ್ಯಾತ್ಮಿಕ ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮ: ನರಸಣ್ಣ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-**ಶ್ರೀಗುರು ಬೋಳಬಸವೇಶ್ವರ 13ನೇ ಜಾತ್ರಾ ಮಹೋತ್ಸವ ಅಂಗವಾಗಿ ಏ.20 ರಂದು ಸಾಮೂಹಿಕ ಮದುವೆ, ಮತ್ತು ಉಡಿ ತುಂಬುವ ಕಾರ್ಯಕ್ರಮ ಆಧ್ಯಾತ್ಮಿಕ ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮ ಏರ್ಪಾಡಿಸಲಾಗಿದೆ ಎಂದು ಶ್ರೀ ಗುರು ಬೋಳಬಸವೇಶ್ವರ ದೇವಸ್ಥಾನದ ಪಟ್ಟಾಧ್ಯಕ್ಷ ಎಸ್ ನರಸಣ್ಣ ಪೂಜಾರಿ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಶ್ರೀ ಗುರು ಬೋಳ ಬಸವೇಶ್ವರರ ಜಾತ್ರಾ ಮಹೋತ್ಸವ ನಿಮಿತ್ತ ಕಾರ್ಯಕ್ರಮ ಹಮ್ಮಿಕೊಂಡಿದ್ದು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕಡೆಚೂರು, ಕಲ್ಲೂರು, ಹೊಕ್ರಾಣಿ ಸಂಸ್ಥಾನ ಮಠದ ಶ್ರೀ ಗುರು ಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ನೀಲಗಲ್ ಬೃಹನ್ಮಠದ ಡಾ.ವಿದ್ವಾನ್ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು, ಮಾನವಿ ಕಲ್ಮಠದ ವಿರುಪಾಕ್ಷಿ ಪಂಡಿತರಾಧ್ಯ ಶಿವಾಚಾರ್ಯ → 4

# ಏ.21 ರಿಂದ 23 ವರೆಗೆ ಹೊಸೂರು ಗ್ರಾಮದಲ್ಲಿ ಸಂಗಮೇಶ್ವರ ದೇವಸ್ಥಾನದ ಶಿಲಾ ಮೂರ್ತಿಗಳ ಪ್ರತಿಷ್ಠಾಪನೆ-ಎಂ.ವಿರೂಪಾಕ್ಷಿ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-**ಹೊಸೂರು ಗ್ರಾಮ ಐತಿಹಾಸಿಕ ಶ್ರೀಸಂಗಮೇಶ್ವರ ದೇವಸ್ಥಾನದ ನೂತನ ಶಿಲಾಮೂರ್ತಿಗಳ ಪ್ರತಿಷ್ಠಾನೆ ಕಾರ್ಯಕ್ರಮ ಏ.21 ರಿಂದ 23 ವರೆಎಗೆ ವಿಜೃಂಬಣೆಯಿಂದ ನಡೆಸಲಾಗುತ್ತದೆ ಎಂದು ಗ್ರಾಮ ಮುಖಂಡ ಎಂ.ವಿರೂಪಾಕ್ಷಿ ಹೇಳಿದರು.

ಅವರಿಂದ ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ಸರಿ ಸುಮಾರು 3ನೂರು ವರ್ಷಗಳ ಇತಿಹಾಸ ಹೊಂದಿರುವ ಶ್ರೀ ಸಂಗಮೇಶ್ವರ ದೇವಸ್ಥಾನ ಜೀರ್ಣೋದ್ದಾರ ಗ್ರಾಮ ದಾನಿಗಳಿಂದ ನಿರ್ವಹಿಸಲಾಗಿದೆ. 21 ರಂದು ನೂತನ ಶಿಲಾ ಮೂರ್ತಿಗಳ ಮೆರವಣಿಗೆ ಕಲ್ವಟ್ ಬಸವಣ್ಣ ದೇವಸ್ಥಾನದಿಂದ ದೇವಸ್ಥಾನಕ್ಕೆ ಆಗಮಿಸಿ ಜಲಾಧೀವಾಸ ಕಾರ್ಯಕ್ರಮ ನೇರವೆರಲಿದೆ. ಏ.22 ರಂದು ದೇವರ ಮೂರ್ತಿಗಳ ಗಣ ಹೋಮ, ರುದ್ರ ಹೋಮ, ಪ್ರಸಾದ ಹಾಗೂ ಅಖಂಡ ಭಜನೆ ಕಾರ್ಯಕ್ರಮ ನಡೆಯಲಿದೆ.

ಏ.23 ರಂದು ಕಿಲ್ಲೆ ಬೃಹನ್ಮಠದ ಶ್ರೀ ಶಾಂತಮಲ್ಲ ಶಿವಾಚಾರ್ಯರುರಿಂದ ನೂತನ ಮೂರ್ತಿಗಳಿಗೆ ಪ್ರಾಣ ಪ್ರತಿಷ್ಠಾಪನೆ, ಪೂರ್ಣಹುತಿ, ನೂತನ ಗೋಪುರಕ್ಕೆ ಕಳಾಸರೋಹಣ ನಡೆಯಲಿದೆ. → 4

## ಏ.21 ರಿಂದ 26 ವರಗೆ ಶ್ರೀ ವಾಸವಿ ಜಯಂತಿ

# ಭಾವಚಿತ್ರ ಮೆರವಣಿಗೆ ,ಬೈಕ್ ರ್‍ಯಾಲಿ, ದಾಸವಾಣಿ, ನೃತ್ಯ ಕಾರ್ಯಕ್ರಮ- ಪುರೊಷತ್ತಮ ಸಾವಿತ್ರಿ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-**ಆರ್ಯವೈಶ್ಯ ಸಮಾಜಮತ್ತು ಶ್ರೀ ನಗರೇಶ್ವರ ದೇವಸ್ಥಾನ ಸಮಿತಿಗಳ ಸಹಯೋಗದಲ್ಲಿ 10 ನೇ ವರ್ಷದ ಶ್ರೀ ವಾಸವಿ ಜಯಂತಿಯನ್ನು ಏ.22 ರಿಂದ 26 ವರೆಗೆ ಐದು ದಿನಗಳ ಅದ್ದೂರಿ ಆಚರಣೆಗೆ ನಿರ್ಧರಿಸಲಾಗಿದೆ ಎಂದು ಆರ್ಯವೈಶ್ಯ ಸಮಾಜದ ಅಧ್ಯಕ್ಷ ಪುರುಷೋತ್ತಮ ಸಾವಿತ್ರಿ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ,ಏ.21 ರಂದು ಸಂಜೆ 6 ಗಂಟೆಗೆ ಗೋ ಪೂಜೆ, ಧಾನ್ಯಪೂಜೆ, ಸಾಮೂಹಿಕ ಕುಂಕುಮಾರ್ಚನೆಯೊಂದಿಗೆ ಜಯಂತಿ ಕಾರ್ಯಕ್ರಮ ಚಾಲನೆ ನೀಡಲಾಗುತ್ತದೆ. ಏ.22 ರಂದು ಬೆಳಿಗ್ಗೆ ಸುಪ್ರಭಾತ, ಧ್ವಜಾರೋಹಣ, ಕಳಸ ಸ್ಥಾನೆ, ಪಂಚಾಮೃತ ಅಭಿಷೇಕ, ಬೆಳಿಗ್ಗೆ 8 ಗಂಟೆಗೆ ವಾಸವಿ ಜಯಂತಿ ಅಂಗವಾಗಿ ಆರ್ಯವೈಶ್ಯ ಗೀತಾಮಂದಿರದಿಂದ ನಗರೇಶ್ವರ ದೇವಸ್ಥಾನದವರೆಗೆ ಸುಮಂಗಳಿಯರ ಕಳಸದೊಂದಿಗೆ ಮೆರವಣಿಗೆ ನಡೆಯಲಿದೆ. ಮುತ್ತಿನ ಅಲಂಕಾರ, ಮಕ್ಕಳಿಂದ ಭರತನಾಟ್ಯ, ವಿದ್ವಾನ್ ಶಿವರಾಮ ಗುಪ್ತ ಇವರಿಂದ ವಾಸವಿ ಮಾತೆ ಪುರಾಣ, ಸಿಂಹ ವಾಹನ ಉತ್ಸವ ನಡೆಯಲಿದೆ ಎಂದರು → 4

# ಮಂತ್ರಾಲಯ ಬಳಿ ಅಪಘಾತ: ಚಿಕಿತ್ಸೆ ಫಲಿಸದೆ ಮತ್ತಿಬ್ಬರು ಮಹಿಳೆಯರು ಸಾವು-ಗ್ರಾಮದಲ್ಲಿ ಮತ್ತೆ ಸೂತಕದ ಛಾಯೆ

**ಹಾಸನ,ಏ.19**-ಮಂತ್ರಾಲಯದ ಬಳಿ ನಡೆದ ಭೀಕರ ಅಪಘಾತ ಪ್ರಕರಣದಲ್ಲಿ ಮತ್ತಿಬ್ಬರು ಸಾವಿಗೀಡಾಗುವ ಮೂಲಕ ಸಾವಿನ ಸಂಖ್ಯೆ 11ಕ್ಕೆ ಏರಿದೆ. ಮೃತರಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ ಪ್ರಯಾಣಿಸುತ್ತಿದ್ದ ಇಬ್ಬರು ಸಂಬಂಧಿಕರೂ ಸೇರಿದ್ದಾರೆ.

ಎ.16ರಂದು ಬೇಲೂರು ತಾಲೂಕು ಶೆಟ್ಟಿಗೆರೆ ಕುಟುಂಬದ 18 ಮಂದಿ ಮಂತ್ರಾಲಯಕ್ಕೆ ಪಯಣ ಬೆಳೆಸಿದ್ದರು. ಗೂಡ್ಸ್ ಮತ್ತು ಲಾರಿಯ ನಡುವೆ ಸಂಭವಿಸಿದ್ದ ಅಪಘಾತದಿಂದಾಗಿ ಸ್ಥಳದಲ್ಲಿಯೇ 6 ಮಂದಿ ಸಾವನ್ನಪ್ಪಿದ್ದು, ಎ.17ರಂದು ಚಿಕಿತ್ಸೆ ಫಲಿಸದೆ ಬಾಲಕಿ ತೇಜಸ್ವಿನಿ (17) ಕೊನೆಯುಸಿರೆಳೆದಿದ್ದರಿಂದಾಗಿ ಒಂದೇ ಕುಟುಂಬದ 7 ಮಂದಿ ಸಾವಿಗೀಡಾಗಿದ್ದರು.

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಸಾವು - ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ಮತ್ತಿಬ್ಬರು ಮಹಿಳೆಯರು ಚಿಕಿತ್ಸೆ ಫಲಕಾರಿಯಾಗದೆ ಸಾವಿಗೀಡಾಗುವ ಮೂಲಕ ಮೃತರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ.

ಚಿಕಿತ್ಸೆಗೆ ಸ್ಪಂದಿಸದೆ ಜಯಮ್ಮ (65), ಶುಭ (35) ಇಬ್ಬರೂ ಮಹಿಳೆಯರು ಮೃತಪಡುವ ಮೂಲಕ ಕುಟುಂಬದಲ್ಲಿ ಮತ್ತಷ್ಟು ಶೋಕ ಮಡುಗಟ್ಟಿದ್ದು, ಇಡೀ ಗ್ರಾಮದಲ್ಲಿ ಸೂತಕದ ಛಾಯೆ ಆವರಿಸಿದೆ. ಶ್ರೀ ರಾಘವೇಂದ್ರ ಸ್ವಾಮಿಯ ದರ್ಶನಕ್ಕೆ ಮಂತ್ರಾಲಯ ತಲುಪಲು ಕೆಲವೇ ನಿಮಿಷಗಳಿರುವಾಗ ಗುರುವಾರ ಮುಂಜಾನೆ ರಾಷ್ಟ್ರೀಯ ಹೆದ್ದಾರಿ-167ರಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿತ್ತು. ಮಂತ್ರಾಲಯ ತಾಲೂಕಿನ ಚಿಲಕಲಡೋನ ತಿರುವಿನಲ್ಲಿ 22 ಭಕ್ತರಿದ್ದ ವಾಹನ ಸಿಮೆಂಟ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿತ್ತು.ಚಾಲಕ ಸುನಿಲ್ ಬೆಳಗಿನ ಜಾವ 3:15ರ ಸುಮಾರಿಗೆ ನಿದ್ರೆಗೆ ಜಾರಿದ್ದ. ವಾಹನ ಮಾರ್ಗ ತಪ್ಪಿ ಮುಂದೆ ಬರುತ್ತಿದ್ದ ಟ್ಯಾಂಕರ್‌ಗೆ ಡಿಕ್ಕಿ ಹೊಡೆದು ಪ್ರಯಾಣಿಕರು ಹೆದ್ದಾರಿಗೆ ಬಿದ್ದರು ಎಂದು ಪೊಲೀಸರು ತಿಳಿಸಿದ್ದರು.

ಇದೆಲ್ಲವೂ ಸೆಕೆಂಡುಗಳಲ್ಲೇ ನಡೆದು ಹೋಯಿತು. ನಾನು ಚಾಲಕನ ಪಕ್ಕದಲ್ಲಿ ಮಲಗಿದ್ದಾಗ ಜೋರಾದ ಅಪಘಾತದ ಶಬ್ಧ ಕೇಳಿಸಿತು. ನಾನು ವಾಹನದಿಂದ ಹೊರಗೆ ಎಸೆಯಲ್ಪಟ್ಟಿದ್ದೆ. ಕಣ್ಣು ತೆರೆದಾಗ, ಎಲ್ಲೆಡೆ ಜನರು ಗಾಯಗೊಂಡು ಬಿದ್ದಿದ್ದರು ಎಂದು ಬದುಕುಳಿದವರಲ್ಲಿ ಒಬ್ಬರಾದ ಮನೋಜ್ ಹೇಳಿದ್ದರು.

ಎರಡನೇ ಬಾರಿ ಬದುಕು ಕಟ್ಟಿಕೊಂಡಿದ್ದ ಕುಟುಂಬ : ಬೇಲೂರು ಮತ್ತು ಹಳೆಬೀಡು ಭಾಗಗಳಿಗೆ ನೀರುಣಿಸುವ ಸಲುವಾಗಿ ಬೇಲೂರು ತಾಲೂಕಿನಲ್ಲಿ ಹೇಮಾವತಿ ನದಿಗೆ ಅಡ್ಡಲಾಗಿ, ಯಗಚಿ ಜಲಾಶಯವನ್ನು ನಿರ್ಮಾಣ ಮಾಡಲಾಗಿತ್ತು. ಹೀಗಾಗಿ, ಈ ಕುಟುಂಬಗಳು ವಾಸವಿದ್ದ ಗ್ರಾಮ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದರಿಂದ ಸರ್ಕಾರ ಪುನರ್ವಸತಿ ಕಲ್ಪಿಸಿದ ಹಿನ್ನೆಲೆಯಲ್ಲಿ, ಜಲಾಶಯದ ಮೇಲ್ಭಾಗದ ಶೆಟ್ಟಿಗೆರೆಗೆ ಬಂದು ಮೀನು ಹಿಡಿಯುವ ವೃತ್ತಿಯನ್ನು ಮಾಡಿಕೊಂಡು, ತಮ್ಮ ಬದುಕಿನ ಎರಡನೇ ಪಯಣ ಕಟ್ಟಿಕೊಂಡಿದ್ದರು. ಆದರೆ, ದೇವರ ದರ್ಶನಕ್ಕೆ ತೆರಳಿದ್ದ ಕುಟುಂಬದ ಸದಸ್ಯರು ತಮ್ಮ ಎರಡನೇ ಜೀವನದ ಪಯಣವನ್ನು ಇಲ್ಲಿ ಮುಗಿಸಿದ್ದು ದುರಂತ.

# ಹಾಸನದಲ್ಲಿ ಒಂಟಿ ದಂತದ ಕಾಡಾನೆ ಸೆರೆ; ಕಾರ್ಯಾಚರಣೆಗೆ ಜಿಲ್ಲೆಯಲ್ಲೇ ಮೊದಲ ಬಾರಿಗೆ ಶ್ವಾನದಳ ಬಳಕೆ

**ಹಾಸನ,ಏ.19**-ಜಿಲ್ಲೆಯಲ್ಲಿದ್ದ ಒಂಟಿ ದಂತದ ಕಾಡಾನೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಮೂರನೇ ದಿನದ ಕಾರ್ಯಾಚರಣೆ ಆರಂಭಿಸಿದ್ದ ಅರಣ್ಯ ಇಲಾಖೆ ತಂಡ, ಕಾನಳ್ಳಿ ಅರಣ್ಯ ಪ್ರದೇಶದಲ್ಲಿದ್ದ ಆನೆಗೆ ಅರವಳಿಕೆ ಮದ್ದು ನೀಡಿ ಸೆರೆ ಹಿಡಿದಿದ್ದಾರೆ.

ಅರವಳಿಕೆ ಮದ್ದು ನೀಡುತ್ತಿದ್ದಂತೆ ಒಂಟಿಕೋರೆ ಕಾಡಾನೆ ಓಡಿದೆ. ಈ ವೇಳೆ ಕ್ಯಾಪ್ಟನ್ ಕಾಡಾನೆ ಮತ್ತು ಎರಡು ಕಾಡಾನೆಗಳನ್ನು ಬೇರೆ ಬೇರೆ ಮಾಡಿ ಅದನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ತಂಡ ಕಾರ್ಯಾಚರಣೆ ನಡೆಸಿತು. ಸ್ವಲ್ಪ ದೂರ ಓಡಿ ಹೋದ ನಂತರ ಒಂಟಿ ಕೋರೆ ಕಾಡಾನೆ ಪ್ರಜ್ಞೆತಪ್ಪಿ ಬಿದ್ದಿದೆ. ಆಗ ಆರು ಕಾಡಾನೆಗಳು ಅದನ್ನು ಸುತ್ತುವರೆದಿದ್ದವು. ನಂತರ ವೈದ್ಯರು ಅದಕ್ಕೆ ಚಿಕಿತ್ಸೆ ನೀಡಿದರು. ನಂತರ ಅರಣ್ಯ ಇಲಾಖೆ ಸಿಬ್ಬಂದಿ ಆನೆಯ ಕುತ್ತಿಗೆ ಮತ್ತು ಕಾಲುಗಳಿಗೆ ಬಿಗಿಯಾಗಿ ಹಗ್ಗ ಕಟ್ಟುವ ಮೂಲಕ ಅದು ತಪ್ಪಿಸಿಕೊಳ್ಳದಂತೆ ಎಚ್ಚರಿಕೆ ವಹಿಸಿದ್ದರು.

ಕಾಡಾನೆಗೆ ನೀರು ಹಾಕಿ ಆರೈಕೆ ಮಾಡಿ ಹಗ್ಗ ಕಟ್ಟಿದ ಇಟಿಎಫ್ ಸಿಬ್ಬಂದಿ ನಂತರ ಅದನ್ನು ಸ್ಥಳಾಂತರ ಮಾಡಲು ಸಿದ್ದತೆ ಮಾಡಿಕೊಂಡರು. ಬೇಲೂರು ತಾಲೂಕಿನ ರಾಜಶೇಖರ್ ಎಂಬ ವ್ಯಕ್ತಿಯನ್ನು ಎಪ್ರಿಲ್ 12 ರಂದು ಇದೇ ಕಾಡಾನೆ ಸೊಂಡಿಲಿನಿಂದ ತಿವಿದು ಬಲಿ ಪಡೆದಿತ್ತು. ಇದರ ಬೆನ್ನಿಗೆ ಆನೆಯನ್ನು ಸೆರೆಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದರಿಂದಾಗಿ ಮರುದಿನವೇ ಸರ್ಕಾರ ಎಚ್ಚೆತ್ತು ಒಂದು ಆನೆಯನ್ನು ಸೆರೆ ಹಿಡಿಯಲು ಅನುಮತಿ ನೀಡಿತ್ತು.

ಶ್ವಾನದಳದ ಮೂಲಕ ಕಾಡಾನೆ ಪತ್ತೆ : ಜಿಲ್ಲೆಯಲ್ಲಿ ಕಾಡಾನೆ ಹಿಡಿಯಲು ಶ್ವಾನದಳವನ್ನು ಉಪಯೋಗಿಸಿಕೊಂಡಿರುವುದು ಇದೇ ಮೊದಲು. ವ್ಯಕ್ತಿಯೊಬ್ಬರನ್ನು ಬಲಿ ಪಡೆದ ಬಳಿಕ ಶ್ವಾನದಳದ ಸಹಾಯದಿಂದ ಒಂಟಿ ಕೋರೆ ಆನೆ ಪತ್ತೆ ಹಚ್ಚಲು ಬೆಂಗಳೂರಿನ ಬನ್ನೇರುಘಟ್ಟದಿಂದ ಶ್ವಾನವನ್ನು ಕರೆತರಲಾಗಿತ್ತು.ಈ ಶ್ವಾನವು ಒಂಟಿಕೋರೆ ಆನೆಯ ಚಲನ ವಲನಗಳನ್ನು ಹಾಗೂ ಅದು ಸಾಗಿರುವ ಹಾದಿಯನ್ನು ತನ್ನ ವಾಸನೆಯ ಮೂಲಕ ಪತ್ತೆ ಮಾಡಿ ಕೊನೆಗೆ ಅದು ಇರುವ ಜಾಗದ ಸುಮಾರು 100 ಮೀಟರ್ ಅಂತರದಲ್ಲಿ ನಿಲ್ಲುತ್ತದೆ. ಹೀಗೆ, ಶ್ವಾನದಳದ ಮೂಲಕ ಮೊದಲ ಬಾರಿಗೆ ಡಿಸಿಎಫ್ ಸೌರಭ್‌ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆ ಯಶಸ್ವಿಯಾಗಿದೆ. ಈ ಕುರಿತು ಡಿಸಿಎಫ್ ಸೌರಭ್‌ಕುಮಾರ್ ಅವರು ಮಾತನಾಡಿದ್ದು, ಆನೆ ಸೆರೆ ಹಿಡಿಯುವ ಕಾರ್ಯಾಚರಣೆಗೆ ನಾವು ಶ್ವಾನದಳವನ್ನು ಬಳಕೆ ಮಾಡಿದ್ದೇವೆ. ಈ ಹಿಂದೆ ಆನೆಯನ್ನು ಸೆರೆಹಿಡಿಯಲು ಮುಂದಾದಾಗ ಅದಕ್ಕೆ ಕಟ್ಟಿದ ಹಗ್ಗ ಕಟ್ಟಾಗಿದ್ದರಿಂದಾಗಿ ಅದು ತಪ್ಪಿಸಿಕೊಂಡಿತ್ತು.

## ವಿಜಯನಗರ: ಕಾರು, ಬಸ್ಸು, ಬೈಕ್‌ಗಳಿಗೆ ಡಿಕ್ಕಿ ಹೊಡೆದ ಲಾರಿ

# ಇಬ್ಬರು ಸಾವು, 21ಕ್ಕೂ ಅಧಿಕ ಪ್ರಯಾಣಿಕರಿಗೆ ಗಾಯ

**ವಿಜಯನಗರ,ಏ.19**-ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಸಮೀಪದ ಡಣಾಪುರದಲ್ಲಿ ಇಂದು ಬೆಳಗ್ಗೆ ರಾಷ್ಟ್ರೀಯ ಹೆದ್ದಾರೆ 50ರಲ್ಲಿ ಭೀಕರ ಸರಣಿ ಅಪಘಾತ ಸಂಭವಿಸಿದೆ. ಈ ದುರ್ಘಟನೆಯಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಎಸ್. ಅವರು ತಿಳಿಸಿದ್ದಾರೆ.



ಸುಜಾತಾ (40) ದುರಗಪ್ಪ (55) ಸಾವನ್ನಪ್ಪಿರೋ ದುರ್ದೈವಿಗಳು. ಬೆಳ್ಳುಳ್ಳಿ ತುಂಬಿಕೊಂಡು ದೆಹಲಿಯಿಂದ ಬೆಂಗಳೂರು ಕಡೆ ಬರುತ್ತಿದ್ದ ಲಾರಿಯೊಂದು ನಿಯಂತ್ರಣ ತಪ್ಪಿ ಬೈಕ್, ಕಾರು, ಬಸ್‌ಗೆ ಡಾಣಾಪುರ ಗ್ರಾಮದ ಬಿಎಂಎಂ ಫ್ಯಾಕ್ಟರಿ ಬಳಿ ಡಿಕ್ಕಿ ಹೊಡೆದಿದೆ. ಕೊನೆಗೆ ಇನ್ನೊಂದು ಬೈಕ್‌ಗೆ ಗುದ್ದಿ ಲಾರಿ ರಸ್ತೆ ಬದಿಗೆ ಉರುಳಿಬಿದ್ದ ಪರಿಣಾಮ ಅಪಘಾತದ ತೀವ್ರತೆ ಹೆಚ್ಚಾಗಿದೆ. ಹೊಸಪೇಟೆಯಿಂದ ಚಿತ್ರದುರ್ಗದತ್ತ ತೆರಳುತ್ತಿದ್ದ ಸರ್ಕಾರಿ ಬಸ್‌ಗೆ ಲಾರಿ ಹಿಂಬದಿಯಿಂದ ಗುದ್ದಿದ ಪರಿಣಾಮ ಬಸ್‌ನಲ್ಲಿದ್ದ ಸುಮಾರು ಪ್ರಯಾಣಿಕರು ಗಾಯಗೊಂಡಿದ್ದಾರೆ. ಮರಿಯಮ್ಮನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಘಟನೆಗೆ ಲಾರಿ ಚಾಲಕನ ನಿರ್ಲಕ್ಷವೇ ಕಾರಣ ಎಂದು ವಿಜಯನಗರ ಎಸ್ಪಿ ಎಸ್. ಜಾಹ್ನವಿ ಅವರು ಹೇಳಿದರು.

ಗಾಯಾಳುಗಳನ್ನು ತಕ್ಷಣವೇ ಹೊಸಪೇಟೆ ಸರ್ಕಾರಿ ಆಸ್ಪತ್ರೆ, ಕೊಪ್ಪಳ, ಬಳ್ಳಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಅಪಘಾತ ಸಂಭವಿಸಿದ ಸ್ಥಳದಲ್ಲಿ ಹೆದ್ದಾರಿ ದುರಸ್ತಿ ಹಾಗೂ ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಒಂದೇ ಬದಿಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಇದೇ ಕಾರಣದಿಂದ ಅಪಘಾತ ಸಂಭವಿಸಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ.

ಇದೇ ಲಾರಿ ಅಪಘಾತಕ್ಕೂ ಮುನ್ನ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿರುವ ಸ್ಮಯರ್ ಕಂಪನಿ ಬಳಿ ಎರಡು ಬೈಕ್‌ಗಳಿಗೆ ಹಿಟ್ ಅಂಡ್ ರನ್ ಮಾಡಿ ಬಂದಿತ್ತು.

ಆ ಘಟನೆದಲ್ಲಿ ಮೂವರು ಗಾಯಗೊಂಡಿದ್ದಾರೆ. ಅಪಘಾತದ ಪರಿಣಾಮವಾಗಿ ಹೆದ್ದಾರಿಯಲ್ಲಿ ಎರಡೂ ಬದಿಗಳಲ್ಲಿ ಸುಮಾರು ಮೂರು ಕಿಲೋಮೀಟರ್ ವರೆಗೆ ಸಂಚಾರ ದಟ್ಟಣೆ ಉಂಟಾಗಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ. ವಿಜಯನಗರ ಜಿಲ್ಲಾ ಎಸ್ಪಿ ಜಾಹ್ನವಿ ಎಸ್, ಮರಿಯಮ್ಮನ ಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

# ಮಹಿಳಾ ಮೀಸಲಾತಿ ಹೆಸರಲ್ಲಿ ದಕ್ಷಿಣ ಭಾರತದ ಮೇಲೆ ರಾಜಕೀಯ ಸರ್ಜಿಕಲ್ ಸ್ಟ್ರೈಕ್‌ಗೆ ಬಿಜೆಪಿ ಸಂಚು-ಡಿ.ಕೆ.ಶಿವಕುಮಾರ್

**ಬೆಂಗಳೂರು,ಏ.19**-ಕೇಂದ್ರದ ಎನ್‌ಡಿಎ ಸರ್ಕಾರವು ಮಹಿಳಾ ಸಬಲೀಕರಣದ ಮುಖವಾಡ ಧರಿಸಿ ದಕ್ಷಿಣ ಭಾರತದ ರಾಜಕೀಯ ಅಸ್ಮಿತೆಯನ್ನು ಅಳಿಸಲು ಭೀಕರ ಸಂಚು ರೂಪಿಸಿದೆ ಎಂದು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ಬಿಜೆಪಿ ಜಾರಿಗೆ ತರಲು ಹೊರಟಿರುವ ಮಹಿಳಾ ಮೀಸಲಾತಿ ಮಸೂದೆಯು ಕೇವಲ ಒಂದು ಟಿಮಾಯಾಜಾಲವಾಗಿದ್ದು, ಇದು ದಕ್ಷಿಣದ ರಾಜ್ಯಗಳ ಹಕ್ಕುಗಳನ್ನು ಕಸಿದುಕೊಳ್ಳಲು ನಡೆಸುತ್ತಿರುವ ಟಿರಾಜಕೀಯ ಸರ್ಜಿಕಲ್ ಸ್ಟ್ರೈಕ್ ಎಂದು ಪ್ರಕಟಣೆಯಲ್ಲಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಕ್ಷೇತ್ರ ಮರುವಿಂಗಡಣೆ ಎಂಬ ಕುತಂತ್ರ: ಮಹಿಳೆಯರಿಗೆ ರಾಜಕೀಯ ಅಧಿಕಾರ ಸಿಗಬೇಕು ಎಂಬುದು ಕಾಂಗ್ರೆಸ್ ಪಕ್ಷದ ಅಚಲ ನಿಲುವು. ರಾಜೀವ್ ಗಾಂಧಿಯವರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ತಂದಾಗ ವಿರೋಧಿಸಿದವರು ಈಗ ಮಹಿಳಾ ಮೀಸಲಾತಿಯ ಜಪ ಮಾಡುತ್ತಿದ್ದಾರೆ. ಆದರೆ, ಈ ಮೀಸಲಾತಿ ಜಾರಿಯಾಗಲು ಟಿಕ್ಷೇತ್ರ ಮರುವಿಂಗಡಣೆಟಿ ಆಗಲೇಬೇಕು ಎಂಬ ಷರತ್ತು ವಿಧಿಸಿರುವುದು ತರ್ಕಹೀನವಾದುದು. ಇದು ಮಹಿಳೆಯರಿಗೆ ತಕ್ಷಣಕ್ಕೆ ನ್ಯಾಯ ಒದಗಿಸುವ ಬದಲು, ಮೀಸಲಾತಿಯನ್ನು ಮುಂದೂಡುವ ಮತ್ತು ಮರುವಿಂಗಡಣೆಯನ್ನು ಬಿಜೆಪಿಯ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಷಡ್ಯಂತ್ರವಾಗಿದೆ ಎಂದು ಕಿಡಿಕಾರಿದ್ದಾರೆ. ಪ್ರಗತಿಪರ ರಾಜ್ಯಗಳಿಗೆ ಸಿಗುತ್ತಿರುವ ಶಿಕ್ಷೆಯೇ? ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣ ಭಾರತಕ್ಕೆ ಅನ್ಯಾಯ ಆಗುತ್ತಿದೆ. ಕರ್ನಾಟಕ, ತಮಿಳುನಾಡು, ಕೇರಳದಂತಹ ರಾಜ್ಯಗಳು ರಾಷ್ಟ್ರೀಯ ಹಿತಾಸಕ್ತಿಯಿಂದ ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸಿವೆ. ಆದರೆ, ಈಗ ಕೇಂದ್ರ ಸರ್ಕಾರ ಜನಸಂಖ್ಯೆ ಹೆಚ್ಚಿಸಿಕೊಂಡ ರಾಜ್ಯಗಳಿಗೆ ಹೆಚ್ಚಿನ ಸಂಸತ್ ಸ್ಥಾನ ನೀಡಿ, ಜನಸಂಖ್ಯೆ ನಿಯಂತ್ರಿಸಿದ ನಮ್ಮಂತಹ ಪ್ರಗತಿಪರ ರಾಜ್ಯಗಳ ಪ್ರಾತಿನಿಧ್ಯ ಕುಗ್ಗಿಸಲು ಹೊರಟಿದೆ. ಇದು ಕನ್ನಡಿಗರ ಹಾಗೂ ಇಡೀ ದಕ್ಷಿಣ ಭಾರತೀಯರ ಸ್ವಾಭಿಮಾನಕ್ಕೆ ಎಸಗುತ್ತಿರುವ ದ್ರೋಹ ಎಂದು ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಜೆಪಿಗೆ ನೇರ ಪ್ರಶ್ನೆಗಳು: ಮಹಿಳಾ ಮೀಸಲಾತಿ ನೀಡಲು ಕ್ಷೇತ್ರ ಮರುವಿಂಗಡಣೆ ಆಗಲೇಬೇಕು ಎಂಬ ಹಠವೇಕೆ? ಈಗಿರುವ 543 ಕ್ಷೇತ್ರಗಳಲ್ಲೇ ಮೀಸಲಾತಿ ನೀಡಲು ನಿಮಗಿರುವ ತಡೆಯೇನು ಎಂದು ಪ್ರಶ್ನಿಸಿದ್ದಾರೆ. ಜನಸಂಖ್ಯೆ ನಿಯಂತ್ರಿಸಿದ ದಕ್ಷಿಣದ ರಾಜ್ಯಗಳ ಸಂಸತ್ ಸ್ಥಾನಗಳ ಸಂಖ್ಯೆ ಇಳಿಕೆಯಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಕಾನೂನಾತ್ಮಕವಾಗಿ ಗ್ಯಾರಂಟಿ ನೀಡುತ್ತದೆಯೇ? ಎಂದು ಡಿಕೆಶಿ ಪ್ರಶ್ನಿಸಿದ್ದಾರೆ.

ರಾಜಿ ಇಲ್ಲದ ಹೋರಾಟ: ಉತ್ತರ ಭಾರತದ ಹಿಂದಿ ಬೆಲ್ಟ್ ರಾಜ್ಯಗಳಲ್ಲಿ ಸ್ಥಾನಗಳನ್ನು ಹೆಚ್ಚಿಸಿಕೊಂಡು ದಕ್ಷಿಣದ ಧ್ವನಿ ಕ್ಷೀಣಿಸುವಂತೆ ಮಾಡುವುದು ಬಿಜೆಪಿಯ ಗುಪ್ತ ಅಜೆಂಡಾ. ಸಂಸತ್ತಿನಲ್ಲಿ ನಮ್ಮ ಧ್ವನಿ ಕ್ಷೀಣಿಸಿದರೆ ತೆರಿಗೆ ಹಣದ ಹಂಚಿಕೆಯಲ್ಲೂ ನಮಗೆ ಅನ್ಯಾಯವಾಗುತ್ತದೆ. ಇದನ್ನು ಕಾಂಗ್ರೆಸ್ ಪಕ್ಷ ಎಂದಿಗೂ ಒಪ್ಪುವುದಿಲ್ಲ. ನಾವು ಮಹಿಳಾ ಮೀಸಲಾತಿಯನ್ನು ಸ್ವಾಗತಿಸುತ್ತೇವೆ, ಆದರೆ ಅದರ ಹೆಸರಲ್ಲಿ ನಡೆಯುವ ಪ್ರಾದೇಶಿಕ ಅನ್ಯಾಯವನ್ನು ಬಲವಾಗಿ ವಿರೋಧಿಸುತ್ತೇವೆ. ನಮ್ಮ ರಾಜ್ಯದ ಹಿತಾಸಕ್ತಿ ಬಲಿ ಕೊಡಲು ನಾವು ಬಿಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಮಹಿಳಾ ಮೀಸಲಾತಿ ಎಂಬುದು ಮಹಿಳೆಯರ ಹಕ್ಕಾಗಬೇಕೇ ಹೊರತು, ದಕ್ಷಿಣ ಭಾರತವನ್ನು ಹತ್ತಿಕ್ಕುವ ಆಯುಧವಾಗಬಾರದು. ಒಕ್ಕೂಟ ವ್ಯವಸ್ಥೆಯ ಅಡಿಪಾಯಕ್ಕೆ ಧಕ್ಕೆ ತರುತ್ತಿರುವ ಕೇಂದ್ರ ಸರ್ಕಾರವು ತಕ್ಷಣವೇ ಮರುವಿಂಗಡಣೆಯ ಷರತ್ತನ್ನು ಕೈಬಿಟ್ಟು ಮಹಿಳಾ ಮೀಸಲಾತಿಯನ್ನು ಜಾರಿಗೆ ತರಬೇಕು, ಇಲ್ಲದಿದ್ದರೆ ದಕ್ಷಿಣ ಭಾರತದ ಜನತೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಡಿಸಿಎಂ ಎಚ್ಚರಿಸಿದ್ದಾರೆ.

# ಮೈಸೂರು: ವಿವಾಹೇತರ ಸಂಬಂಧಕ್ಕೆ ಅಡ್ಡಿಯಾಗುತ್ತಾನೆಂದು ಗಂಡನ ಕೊಂದ ಪತ್ನಿ ಸೇರಿ ಪ್ರಿಯಕರನೂ ಅರೆಸ್ಟ್

**ಮೈಸೂರು,ಏ.19**-ಅನೈತಿಕ ಸಂಬಂಧಕ್ಕೆ ಅಡ್ಡಿಯಾಗುತ್ತಾನೆ ಎಂದು ಗಂಡನನ್ನು ಕೊಲೆ ಮಾಡಿಸಿದ ಪತ್ನಿ ಹಾಗೂ ಕೊಲೆ ಮಾಡಿದ ಪ್ರಿಯಕರನ್ನು ಪೊಲೀಸರು ಬಂಧಿಸಿದ್ದಾರೆ.



ಸರಗೂರು ತಾಲೂಕಿನ ಕುರ್ಣೆಗಾಲ ಗ್ರಾಮದ ಜವರಪ್ಪ ಕೊಲೆಯಾದ ವ್ಯಕ್ತಿ. ಮೈಸೂರು ತಾಲೂಕಿನ ಮಾವಿನಹಳ್ಳಿ ಗ್ರಾಮದ ಸಿದ್ದೇಶ್ (32), ಕುರ್ಣೆಗಾಲ ಗ್ರಾಮದ ಅಮೃತಾ (26) ಬಂಧಿತ ಆರೋಪಿಗಳು. ಕೊಲೆ ಆರೋಪಿಗಳನ್ನು 24 ಗಂಟೆಯೊಳಗೆ ಬಂಧಿಸುವಲ್ಲಿ ಸರಗೂರು ಪೊಲೀಸರು ಯಶಸ್ವಿಯಾಗಿದ್ದಾರೆ. ಆರೋಪಿ ಸಿದ್ದೇಶ್, ಮೃತನ ಪತ್ನಿ ಅಮೃತಾ ಜತೆ ವಿವಾಹೇತರ ಸಂಬಂಧ ಇಟ್ಟುಕೊಂಡಿದ್ದ, ತನ್ನ ಪತಿ ಇದ್ದರೆ ತೊಂದರೆ ಯಾಗಲಿದೆ ಎಂದು ಅಮೃತಾ ಕುಮ್ಮಕ್ಕಿನಿಂದ ಜವರಪ್ಪ ಅವರನ್ನು ಆರೋಪಿ ಸಿದ್ದೇಶ್ ಕೊಲೆ ಮಾಡಿರುವುದು ಎಂದು ಪೊಲೀಸರು ತಿಳಿಸಿದ್ದಾರೆ.

ನಾಪತ್ತೆ ದೂರು ದಾಖಲು: ಮೃತ ಜವರಪ್ಪನ ಸಹೋದರ ರವಿ ಮಾಹಿತಿ ನೀಡಿದ್ದು, ಸರಗೂರು ತಾಲೂಕಿನ ಕುರ್ಣೆಗಾಲ ಗ್ರಾಮದ ಜವರಪ್ಪ ನಂಜನಗೂಡು ತಾಲೂಕಿನ ಹಾಡ್ಯ ಗ್ರಾಮದ ಅಮೃತಾಳೊಂದಿಗೆ ವಿವಾಹವಾಗಿದ್ದು, ಇಬ್ಬರು ಮಕ್ಕಳಿದ್ದಾರೆ. ಗಂಡ ಹೆಂಡತಿ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿದ್ದು, 12 ದಿನಗಳ ಹಿಂದೆ ನನ್ನ ಅತ್ತಿಗೆ ಅಮೃತ ಮಕ್ಕಳನ್ನು ಕರೆದುಕೊಂಡು ಹಬ್ಬಕ್ಕೆಂದು ತವರು ಮನೆಗೆ ಹೋಗಿದ್ದರು. ಎ.16ರಂದು ನಮ್ಮ ಅಣ್ಣ ಹೆಂಡತಿ ಮನೆಗೆ ಹೋಗಿ ಬರುತ್ತೇನೆ ಎಂದು ಹೇಳಿ ಹೋಗಿದ್ದು, ಸಂಜೆ 6:45ರ ಸಮಯದಲ್ಲಿ ಫೋನ್ ಮಾಡಿ ನಾನು ಹೆಡಿಯಾಲದಲ್ಲಿ ಇದ್ದೇನೆ. ಊರಿಗೆ ಬರುತ್ತೇನೆಂದು ತಿಳಿಸಿದ್ದ. ಆದ್ರೆ ಮನೆಗೆ ಬಂದಿರಲಿಲ್ಲ. ಮಾರನೇ ದಿನ ಬೆಳಗ್ಗೆ6:30ಕ್ಕೆ ಗ್ರಾಮದ ಸಮೀಪದ ರಸ್ತೆ ಬದಿಯಲ್ಲಿ ಮೃತದೇಹ ಪತ್ತೆಯಾಗಿತ್ತು. ಯಾರೋ ಕೊಲೆ ಮಾಡಿದ್ದಾರೆ. ಸೂಕ್ತ ಕ್ರಮವಹಿಸಬೇಕು ಎಂದು ಮೃತ ಜವರಪ್ಪನ ಸಹೋದರ ಸರಗೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರ್.

24ಗಂಟೆಯೊಳಗೆ ಸೆರೆ: ಮೈಸೂರಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್‌ಪಿ ರವಿ ಅವರ ನೇತೃತ್ವದಲ್ಲಿ ಮೂರು ಪೊಲೀಸ್ ತಂಡಗಳನ್ನು ರಚಿಸಿ ಸರಗೂರು ವೃತ್ತ ನಿರೀಕ್ಷಕ ಪ್ರಸನ್ನಕುಮಾರ್, ಪಿಎಸ್‌ಐಗಳಾದ ಆರ್. ಕಿರಣ್, ಚಂದ್ರಹಾಸ ನಾಯಕ, ಆರ್.ಕುಮಾರ್ ಹಾಗೂ ಠಾಣೆಯ ಎಎಸ್‌ಐಗಳಾದ ಶ್ರೀಕಂಠಸ್ವಾಮಿ, ಕೃಷ್ಣಕುಮಾರ್, ಸಿಬ್ಬಂದಿಗಳಾದ ಇಮ್ರಾನ್ ಅಹಮದ್, ಶಿವರಾಜು. ಎಂ.ಎಸ್. ಶೋಭಾ ಎಂ ಹಾಗೂ ಚಾಲಕರಾದ ಆನಂದ ಮತ್ತು ಶಿವಪ್ಪ, ರಾಮಕೃಷ್ಣ ಅವರನ್ನು ನೇಮಿಸಿದ್ದರು. ಜಿಲ್ಲಾ ಪೊಲೀಸ್ ಕೃಷ್ಣಯ್ಯ, ವಿನಯಕುಮಾರ್, ಸುನೀಲ್ ಕುಮಾರ್, ರಮೇಶ, ಪರಶಿವಮೂರ್ತಿ, ಸೋಮನಾಯಕ, ಮಲಿಯಪ್ಪ, ಕಚೇರಿಯ ಟೆಕ್ನಿಕಲ್ ಸೆಲ್ ಅವರ ಸಹಾಯದಿಂದ ಆರೋಪಿಗಳನ್ನು ಘಟನೆ ನಡೆದ 24 ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

# ಪ್ರಧಾನಿಯಿಂದ ಮೊಸಳೆ ಕಣ್ಣೀರು ವಿರುದ್ಧ ಪ್ರತಿಪಕ್ಷಗಳಿಂದ ವಾಗ್ದಾಳಿ

**ನವದೆಹಲಿ,ಏ.19**- ಚುನಾವಣೆಗಳ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣವು ರಾಜಕೀಯ ಪ್ರೇರಿತ, ಸತ್ವರಹಿತ ಮತ್ತು ಪ್ರಜಾಪ್ರಭುತ್ವದ ಮಾನದಂಡಗಳ ಉಲ್ಲಂಘನೆ ಯಾಗಿದೆ ಎಂದು ವಿರೋಧ ಪಕ್ಷದ ನಾಯಕರು ಟೀಕಿಸಿದ್ದಾರೆ.

ಹಲವು ರಾಜ್ಯಗಳಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ, ಆ ಭಾಷಣವನ್ನು ಪ್ರಚಾರ ಭಾಷಣವೆಂದು ಪರಿಗಣಿಸಿ, ಅದರ ವೆಚ್ಚವನ್ನು ಬಿಜೆಪಿಯ ಚುನಾವಣಾ ವೆಚ್ಚಕ್ಕೆ ಸೇರಿಸಬೇಕು ಎಂದು ಅವರು ಸೂಚಿಸಿದ್ದಾರೆ. ಇದು ಅಧಿಕೃತ ವೇದಿಕೆಗಳ ದುರುಪಯೋಗವಾಗಿದೆ ಎಂದು ಆರೋಪಿಸಿದ್ದಾರೆ.

ಈ ಕುರಿತು ಸಿಪಿಐ(ಎಂ) ರಾಜ್ಯಸಭಾ ನಾಯಕ ಜಾನ್ ಬ್ರಿಟ್ಟಾಸ್ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಯಾವುದೇ ಪ್ರಧಾನಿ ಈ ರೀತಿ ವಿರೋಧ ಪಕ್ಷಗಳನ್ನು ಬಹಿರಂಗವಾಗಿ ಟೀಕಿಸಲು ಮತ್ತು ಗುರಿಯಾಗಿಸಲು ರಾಷ್ಟ್ರೀಯ ಭಾಷಣವನ್ನು ಬಳಸಿಲ್ಲ. ವಿರೋಧ ಪಕ್ಷಗಳನ್ನು ಟೀಕಿಸಲು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡುವ ಮೂಲಕ ಪ್ರಧಾನಿಯವರು ದೀರ್ಘ ಕಾಲದ ಪ್ರಜಾಪ್ರಭುತ್ವದ ರೂಢಿಯನ್ನು ಮುರಿದಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆಯ ಮೇಲಿನ ವಿರೋಧವನ್ನು ನೇರವಾಗಿ ಟೀಕಿಸುವ ಮೂಲಕ ಮತ್ತು ಅವರ ಕ್ರಮಗಳನ್ನು ಟಿಭ್ರೂಣ ಹತ್ಯೆಟಿ ಮತ್ತು ಮಹಿಳಾ ವಿರೋಧಿಟಿ ಎಂದು ಹೋಲಿಸುವ ಮೂಲಕ, ಬಿಜೆಪಿ ಆರೋಗ್ಯಕರ ಸಂಸದೀಯ ಸಂಪ್ರದಾಯಗಳು ಮತ್ತು ಸಾಂವಿಧಾನಿಕ ಸಂಪ್ರದಾಯಗಳನ್ನು ದುರ್ಬಲಗೊಳಿಸಲು ಯಾವುದೇ ಮಟ್ಟಕ್ಕೆ ಹೋಗಲು ಸಿದ್ಧವಾಗಿದೆ ಎಂಬುದನ್ನು ಈ ಭಾಷಣ ಸ್ಪಷ್ಟಪಡಿಸಿದೆ ಎಂದು ಹೇಳಿದ್ದಾರೆ.

ಲೋಕಸಭೆಯಲ್ಲಿನ ಸೋಲಿನ ನಂತರ ಸರ್ಕಾರ ತನ್ನ ಸಮತೋಲನವನ್ನು ಕಳೆದುಕೊಂಡಿದೆ ಎಂಬುದು ಸ್ಪಷ್ಟವಾಗಿದೆಟಿ ಎಂದು ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಟೀಕಿಸಿದ್ದಾರೆ.

ಸಿಪಿಐ ರಾಜ್ಯಸಭಾ ಸಂಸದ ಪಿ. ಸಂದೋಷ್ ಕುಮಾರ್ ಅವರು, ಪ್ರಧಾನಿಯವರ ಭಾಷಣವನ್ನು ಟಿಟೊಳ್ಳುಟಿ ಮತ್ತು ಟಿಯಾವುದೇ ಅರ್ಥಪೂರ್ಣ



ವಿಷಯವಿಲ್ಲದ ಭಾಷಣ ಎಂದು ಕರೆದಿದ್ದಾರೆ.

ಪ್ರಧಾನಿಯವರು ಯಾವುದೇ ವಿವರಣೆಯನ್ನು ನೀಡಿಲ್ಲ. ಯಾವುದೇ ಹೊಣೆಗಾರಿಕೆಯನ್ನು ಹೊಂದಿಲ್ಲ. ಸರ್ಕಾರದ ಸ್ವಂತ ವೈಫಲ್ಯವನ್ನು ಮರೆಮಾಚಲು ಉದ್ದೇಶಿಸಲಾದ ಕಲ್ಪಿತ ನಿರೂಪಣೆಯ ಪುನರಾವರ್ತನೆಯನ್ನು ಮಾತ್ರ ನೀಡಿದ್ದಾರೆ. ಇದು ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣವಲ್ಲ. ಬದಲಾಗಿ ವಾಕ್ಚಾತುರ್ಯದ ಮೂಲಕ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನವಾಗಿದೆಟಿ ಎಂದು ಅವರು ಬರೆದಿದ್ದಾರೆ.

ಐದು ರಾಜ್ಯಗಳಲ್ಲಿ ಜಾರಿಯಲ್ಲಿರುವ ಮಾದರಿ ನೀತಿ ಸಂಹಿತೆಯನ್ನು ದೂರದರ್ಶನ ಮತ್ತು ಸಂಸದ್ ಟಿವಿಯಂತಹ ಸಾರ್ವಜನಿಕ ಪ್ರಸಾರಕರನ್ನು ಪಕ್ಷಪಾತದ ಸಂದೇಶಕ್ಕಾಗಿ ಬಳಸುವ ಮೂಲಕ ಸರ್ಕಾರವು ಟಿಬಹಿರಂಗವಾಗಿ ದುರುಪಯೋಗಪಡಿಸಿಕೊಂಡಿದೆಟಿ ಎಂದಿರುವ ಅವರು, ಇದು ತೀವ್ರ ಖಂಡನೀಯ ಎಂದಿದ್ದಾರೆ.

ಎಪ್ರಿಲ್ 16, 2026 ರಂದು ತನ್ನದೇ ಆದ ಗೆಜೆಟ್ ಅಧಿಸೂಚನೆಯ ಮೂಲಕ, ಸರ್ಕಾರವು ಈಗಾಗಲೇ ಮಹಿಳಾ ಮೀಸಲಾತಿಯನ್ನು ಕಾರ್ಯಗತಗೊಳಿಸಿದೆ. ಮೀಸಲಾತಿ ಅಸ್ತಿತ್ವದಲ್ಲಿದ್ದರೆ, ಈ ರಾಜಕೀಯ ನಾಟಕ ಯಾವುದಕ್ಕಾಗಿ? ಎಂದು ಅವರು ಕೇಳಿದ್ದಾರೆ.

ಆರ್‌ಜೆಡಿ ರಾಜ್ಯಸಭಾ ಸಂಸದ ಮನೋಜ್ ಝಾ ಅವರು, ಮೋದಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣವು ವಾಸ್ತವದಲ್ಲಿ ಟಿಚುನಾವಣಾ ಭಾಷಣಟಿ ದಂತೆ ಕಂಡುಬಂದಿದೆ. ಇಂತಹ ಪರಿಸ್ಥಿತಿಯಲ್ಲಿ, ಅದನ್ನು ಅವರ ಚುನಾವಣಾ ವೆಚ್ಚಕ್ಕೆ ಸೇರಿಸಬೇಕೆಂದು ನಾನು ವಿನಮ್ರವಾಗಿ ವಿನಂತಿಸುತ್ತೇನೆ ಎಂದಿದ್ದಾರೆ.

# ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಬಿಸಿ ಗಾಳಿ ಎಚ್ಚರಿಕೆ ಹಲವೆಡೆ ಗುಡುಗು ಸಹಿತ ಆಲಿಕಲ್ಲು ಮಳೆ ಮುನ್ಸೂಚನೆ

**ಬೆಂಗಳೂರು,ಏ.19**-ರಾಜ್ಯದ ಕರಾ ವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ದಲ್ಲಿ ಇಂದೂ ಸಹ ಬಿಸಿ ಗಾಳಿ ಮುಂದು ವರೆಯಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.


ಉತ್ತರ ಒಳನಾಡಿನ ಬೆಳಗಾವಿ, ಬಾಗಲಕೋಟೆ, ಕಲಬುರ್ಗಿ ಮತ್ತು ವಿಜಯಪುರದಲ್ಲಿ ಗುಡುಗು ಸಹಿತ ಆಲಿಕಲ್ಲು ಮಳೆ ನಿರೀಕ್ಷಿಸಲಾಗಿದ್ದು, ಉಳಿದ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರೆಯಲಿದೆ.

ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಆಲಿಕಲ್ಲು ಮಳೆ ನಿರೀಕ್ಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ಕೊಟ್ಟಿದೆ.

ಬೆಂಗಳೂರು ಸೇರಿದಂತೆ ಹಲವೆಡೆ ಮುಂದಿನ 2 ದಿನಗಳಲ್ಲಿ ತಾಪಮಾನ ಮತ್ತಷ್ಟು ಏರಿಕೆಯಾಗಬಹುದು ಎಂದು ಹವಾಮಾನ ಇಲಾಖೆ ತಿಳಿಸಿದ್ದು, ಮುಂಬರುವ ದಿನಗಳಲ್ಲಿ ಕರಾವಳಿ ಹಾಗೂ ಉತ್ತರ ಒಳನಾಡು ಜಿಲ್ಲೆಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗೆ ಏರುವ ಸಾಧ್ಯತೆಯಿದೆ. ಹೀಗಾಗಿ ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಅನಗತ್ಯವಾಗಿ ಬಿಸಿಲಿನಲ್ಲಿ ಓಡಾಡದಿರುವುದು ಹಾಗೂ ಹೆಚ್ಚು ನೀರು ಸೇವನೆ ಮಾಡುವುದು ಆರೋಗ್ಯಕ್ಕೆ ಉತ್ತಮ ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಉಷ್ಣಾಘಾತದಿಂದ ರಕ್ಷಿಸಿಕೊಳ್ಳಲು ನಿಯಮಿತವಾಗಿ ನೀರು ಕುಡಿಯಿರಿ. ಎಳನೀರು, ಮಜ್ಜಿಗೆ ಅಥವಾ ಮನೆಯಲ್ಲಿ ತಯಾರಿಸಿದ ಹಣ್ಣಿನ ರಸಗಳನ್ನು ಸೇವಿಸಿ. ತಿಳಿ ಬಣ್ಣದ, ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಿ. ಹೊರಗೆ ಹೋಗುವಾಗ ಛತ್ರಿ ಅಥವಾ ಟೋಪಿಯನ್ನು ಬಳಸಿ. ಕೆಫೀನ್ (ಕಾಫಿ/ಟೀ) ಮತ್ತು ಹೆಚ್ಚಿನ ಸಕ್ಕರೆಯುಕ್ತ ಪಾನೀಯಗಳ ಸೇವನೆ ಕಡಿಮೆ ಮಾಡುವಂತೆ ವೈದ್ಯರು ತಿಳಿಸಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ: ಈ ಬಾರಿ ಎಪ್ರಿಲ್‌ನಿಂದ ಜೂನ್ ತಿಂಗಳವರೆಗೆ ದೇಶಾದ್ಯಂತ ಹವಾಮಾನವು ಅತ್ಯಧಿಕ ಉಷ್ಣಾಂಶದಿಂದ ಕೂಡಿರಲಿದೆ. ಪೂರ್ವ, ಈಶಾನ್ಯ ಮತ್ತು ಉತ್ತರದ ರಾಜ್ಯಗಳಲ್ಲಿ ಹಗಲಿನ ತಾಪಮಾನವು ಸಾಮಾನ್ಯಕ್ಕಿಂತ ಗರಿಷ್ಠ ಮತ್ತು ಹೆಚ್ಚಿನ



ಅವಧಿಯ ಶಾಖದ ಅಲೆಗಳಿಂದ ಕೂಡಿರುವ ಸಾಧ್ಯತೆಗಳಿವೆ ಎಂದು ಇತ್ತೀಚೆಗೆ ಭಾರತೀಯ ಹವಾಮಾನ ಇಲಾಖೆ (ಐಋಈ) ಮುನ್ಸೂಚನೆ ನೀಡಿತ್ತು.

ಮಧ್ಯ ಭಾರತದ ಕೆಲವು ಭಾಗಗಳನ್ನು ಹೊರತುಪಡಿಸಿ ದೇಶದ ಹೆಚ್ಚಿನ ಭಾಗಗಳಲ್ಲಿ ರಾತ್ರಿಯ ಅಥವಾ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿರಬಹುದು. ಮಾರ್ಚ್-ಮೇ ಋತುಮಾನದ ಮುನ್ಸೂಚನೆ ಪ್ರಕಾರ, ಪೂರ್ವ ಮತ್ತು ಈಶಾನ್ಯ ರಾಜ್ಯಗಳಲ್ಲಿ ಮಾರ್ಚ್ ತಿಂಗಳಿನಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆ ದಾಖಲಾಗಿದೆ.

ಎಪ್ರಿಲ್ 2026ರಲ್ಲಿ, ಒಡಿಶಾ, ಪಶ್ಚಿಮ ಬಂಗಾಳ, ತಮಿಳುನಾಡು, ಪುದುಚೇರಿ ಮತ್ತು ಆಂಧ್ರಪ್ರದೇಶದ ಕರಾವಳಿ ಪ್ರದೇಶಗಳು ಮತ್ತು ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕದ ಪ್ರತ್ಯೇಕ ಪ್ರದೇಶಗಳ ಅನೇಕ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಯ ದಿನಗಳು ಎದುರಾಗಲಿವೆ ಎಂದು ಐಎಂಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿತ್ತು.

ಶಾಖದ ಅಲೆಯ ಪರಿಸ್ಥಿತಿಗಳ ಹೆಚ್ಚಳವು ಸಾರ್ವಜನಿಕ ಆರೋಗ್ಯ, ಜಲ ಸಂಪನ್ಮೂಲಗಳು, ವಿದ್ಯುತ್ ಬೇಡಿಕೆ ಮತ್ತು ಅಗತ್ಯ ಸೇವೆಗಳಿಗೆ ಗಮನಾರ್ಹ ಅಪಾಯಗಳನ್ನುಂಟು ಮಾಡಬಹುದು. ವಿಶೇಷವಾಗಿ ವೃದ್ಧರು, ಮಕ್ಕಳು, ಹೊರಗಡೆ ಕೆಲಸ ಮಾಡುವವರು ಮತ್ತು ಅನಾರೋಗ್ಯ ಸಮಸ್ಯೆ ಹೊಂದಿರುವವರು ಎಚ್ಚರಿಕೆ ವಹಿಸುವಂತೆ ಐಎಂಡಿ ಸೂಚನೆ ನೀಡಿತ್ತು.

# ಮೈಸೂರು: ಸೊಸೆಗೆ ಸುತ್ತಿಗೆಯಿಂದ ಹೊಡೆದು ಕೊಂದ ಮಾವಿಗೆ ಜೀವಾವಧಿ ಶಿಕ್ಷೆ

**ಮೈಸೂರು,ಏ.19**-ಅನೈತಿಕ್ ಸಂಬಂಧ ಮುಂದುವ ರೆಸಲು ಒಪ್ಪದ ಸೊಸೆಯನ್ನು ಕೊಲೆ ಮಾಡಿದ ಮಾವನಿಗೆ ಮೈಸೂರಿನ ಐದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ನೀಡಿದೆ. ಸೊಸೆ ಕವಿತಾ ಅವರನ್ನು ಕೊಲೆ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ, ಅಪರಾಧಿ ಗಂಟಯ್ಯಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಗಂಟಯ್ಯನ ಪುತ್ರ ಚಿಕ್ಕಲೂರಯ್ಯ ಅವರನ್ನು ಕವಿತಾ ಮದುವೆಯಾಗಿದ್ದರು. ಈಕೆ ಖಾಸಗಿ ಕಾಲೇಜಿನಲ್ಲಿ ಸ್ಟೋರ್ ಕೀಪರ್ ಆಗಿದ್ದರು. ಆಕೆಯೊಂದಿಗೆ ಮಾವ ಗಂಟಯ್ಯ ಅನೈತಿಕ ಸಂಬಂಧ ಇಟ್ಟುಕೊಂಡಿದ್ದ. ಆಕೆಗೆ ಮಹೇಶ ಎಂಬಾತನೊಂದಿಗೆ ಸಂಬಂಧ ಇದೆ ಎಂದು ಗಂಟಯ್ಯ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದ. 2023ರ ಜುಲೈ 10ರಂದು ರಾತ್ರಿ ಆಕೆ ಅನೈತಿಕ ಸಂಬಂಧಕ್ಕೆ ಸಹಕರಿಸಲಿಲ್ಲ ಎಂದು ಕೋಪಗೊಂಡು ಮುಂಜಾನೆ 5 ಗಂಟೆ ಸುಮಾರಿಗೆ ಸೊಸೆ ನಿದ್ರೆಯಲ್ಲಿದ್ದಾಗ ಸುತ್ತಿಗೆಯಿಂದ ಆಕೆಯ ತಲೆ ಹಾಗೂ ಹಣೆಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ಕೊಲೆ ಮಾಡಿದ್ದ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಸಂಬಂಧ ವರುಣಾ ಠಾಣೆ ಪೊಲೀಸರು, ಆರೋಪಿ ಗಂಟಯ್ಯನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಕೆ.ಎನ್.ರೂಪಾ ಅವರು, ಆರೋಪ ಸಾಬೀತಾದ ಹಿನ್ನೆಲೆಯಲ್ಲಿ, ಅಪರಾಧಿ ಗಂಟಯ್ಯನಿಗೆ ಜೀವಾವಧಿ ಶಿಕ್ಷೆ ಹಾಗೂ 1.5 ಲಕ್ಷ ರೂ. ದಂಡ ವಿಧಿಸಿದ್ದಾರೆ. ಅಲ್ಲದೆ, ವಿಚಾರಣೆ ವೇಳೆ ಸುಳ್ಳು ಸಾಕ್ಷಿ ನುಡಿದ ಸರ್ಕಾರಿ ಅಧಿಕಾರಿ ಮೈಕಲ್ ಮ್ಯಾಥ್ಯೂ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳುವಂತೆ ನ್ಯಾಯಾಧೀಶರು ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ವಕೀಲರಾದ ಬಿ.ಇ. ಯೋಗೇಶ್ವ ಹಾಗೂ ಎ.ಎನ್. ಮಧು ಅವರು ವಾದ ಮಂಡಿಸಿದ್ದರು. ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ: ಇತ್ತೀಚೆಗೆ, ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ ಹಾಗೂ ಹಾಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಹತ್ವದ ತೀರ್ಪು ನೀಡಿತ್ತು. ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿ ಶಿಕ್ಷೆ ಪ್ರಮಾಣ ಕಾಯ್ದಿರಿಸಿದ್ದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಈ ಆದೇಶ ಪ್ರಕಟಿಸಿದರು. ಜೊತೆಗೆ ಪ್ರಕರಣದಲ್ಲಿ ಆರೋಪಿಗೆ ನೆರವಾಗಲು ಸಹಕರಿಸಿ ದಾಖಲೆಗಳನ್ನು ತಿರುಚಿದ ಗಂಭೀರ ಆರೋಪ ಸಂಬಂಧ ಪೊಲೀಸ್ ಅಧಿಕಾರಿ (19ನೇ ಆರೋಪಿ) ಚನ್ನಕೇಶವ ಬಿ.ಟಿಂಗರಿರ್ಕ ಎಂಬವರಿಗೆ ಏಳು ವರ್ಷ ಶಿಕ್ಷೆ ವಿಧಿಸಲಾಗಿದೆ.

# ಮಾನ್ವಿ : ಕಮಿಷನ್ ರಾಜಕಾರಣಕ್ಕೆ ಪುಟ್ಟ ಮಕ್ಕಳಿಬ್ಬರ ಬಲಿ..!



ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-** ಬಯಲಾಟ ವೀಕ್ಷಣೆ ವೇಳೆ ಸಮು ದಾಯ ಭವನದ ನಾಮಫಲಕ ಗೋಡೆ ಕುಸಿದು ಬಿದ್ದ ಪರಿಣಾಮ ಇಬ್ಬರು ಪುಟ್ಟ ಮಕ್ಕಳು ಮೃತಪಟ್ಟ ಧಾರುಣ ಘಟನೆ ಮಾನ್ವಿ ತಾಲೂಕಿನ ಬೈಲ್ ಮ ರ್ಚೇಡ್ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ. ಘಟನೆಯಲ್ಲಿ ಇನ್ನಿಬ್ಬರು ಮಕ್ಕಳ ಸಹಿತ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತ ಮಕ್ಕಳನ್ನು ವಿಶ್ವನಾಥ ರಾಮಲಿಂಗ (9) ಮತ್ತು ಸನ್ವಿತಾ ಪೆದ್ದಯ್ಯ (2 ) ಎಂದು ಗುರುತಿಸಲಾಗಿದೆ.

ಬಸ್ಸಮ್ಮ ಹನುಮಂತ್ರಾಯ (40), ಲಕ್ಷ್ಮೀ ಹನುಮಂತ್ರಾಯ (18 ), ಬಾಲಕಿ ಯಲ್ಲಮ್ಮ, ಸಣ್ಣ ವಿರೇಶ (3) ಎಂಬವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ರಾಯಚೂರಿನ ಒಪೆಕ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೈಲ್ ಮರ್ಚೇಡ್ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಬಯಲಾಟ ಆಯೋಜಿಸಲಾಗಿತ್ತು. ಅಲ್ಲೇ ಪಕ್ಕದ ಸಮುದಾಯ ಭವನದ ಮುಂಭಾಗದಲ್ಲಿ ಮಹಿಳೆಯರು ಮಕ್ಕಳೊಂದಿಗೆ ಬಯಲಾಟ ವೀಕ್ಷಣೆಗೆ ಕುಳಿತಿದ್ದರು. ಈ ವೇಳೆ ಏಕಾಏಕಿ ಸಮುದಾಯ ಭವನದ ನಾಮ ಫಲಕ ಕುಸಿದುಬಿದ್ದು ಅವಘಢ ಸಂಭವಿಸಿದೆ ಎಂದು ತಿಳಿದುಬಂದಿದೆ.

# ಕೊಪ್ಪರ : ಡಾ.ಅಂಬೇಡ್ಕರ, ಡಾ.ಬಾಬು ಜಗಜೀವನ್ ರಾಮ್ ಸ್ತಬ್ಧಚಿತ್ರಗಳ ಮೆರವಣಿಗೆ

ಕನ್ನಡ ಮಾತೃ ಭೂಮಿ ವಾರ್ತೆ



**ದೇವದುರ್ಗ,ಏ.19-** ತಾಲೂಕಿನ ಕೊಪ್ಪರ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇ ಡ್ಕರ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಭಾರತದ ಮಾಜಿ ಉಪಪ್ರಧಾನಿ ಡಾ ಬಾಬು ಜಗಜೀವನ್ ರಾಮ್ ಜಯಂತಿಯನ್ನು ಅತ್ಯಂತ ವಿಜೃಂಭ ಣೆಯಿಂದ ಆಚರಿಸಲಾಯಿತು.

ಈ ಜಯಂತಿ ಕಾರ್ಯಕ್ರಮದ ಆಯೋಜಕ ಚನ್ನಬಸವ ಸೂಗರಾಳ ಮ್ಯಾತ್ರಿ ಕೊಪ್ಪರ ಮಾತನಾಡಿ ಕೊಪ್ಪರ ಗ್ರಾಮದ ಯುವ ಸಮುದಾಯವು ಒಗ್ಗಟ್ಟಿನಿಂದ ಸೇರಿಕೊಂಡು ಮಹಾನಾಯಕರ ಜಯಂತಿಗಳು ಮಾಡುತ್ತಿರುವುದು ಸ್ಲಾಘನಿಯ ಜಯಂತಿಗಳು ಕೇವಲ ಸಂಭ್ರಮಕ್ಕೆ ಸೀಮಿತವಾಗದೆ ಮಹಾ ನಾಯಕ, ಮಾನವತಾವಾದಿ ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಮ್ ಅವರ ತತ್ವಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳೋಣ, ಯುವ ಜನತೆ ಮತ್ತು ನಾವು ನೀವೆಲ್ಲರೂ ಅರಿತುಕೊಂಡು ಸಮಾಜದಲ್ಲಿ ಬದುಕಬೇಕಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಸವರಾಜ ಸೂಗರಾಳ ಮ್ಯಾತ್ರಿ, ಯಂಕಪ್ಪ ಮಾನಸಗಲ್, ಹನುಮಂತ ಗಂಡೋಳಿ, ಪೇತ್ರಪ್ಪ ಕೊಪ್ಪರ,ಮಲ್ಲಪ್ಪ ಹೆಂಬೆರಾಳ, ಬಸವರಾಜ ಗುಡಿ,ಬಾಲುರೆಡ್ಡಿ ಕರಿಗುಡ್ಡ, ರಂಗನಾಥ ಮ್ಯಾತ್ರಿ, ಮಲ್ಲಿಕಾರ್ಜುನ ಸುಗರಾಳ ಮ್ಯಾತ್ರಿ , ಮಲ್ಲಿಕಾರ್ಜುನ ಐವಳೆ ಕೊಪ್ಪರ, ಸಿದ್ದು ಮ್ಯಾತ್ರಿ, ಹನುಮಂತ ಮ್ಯಾತ್ರಿ ಬೆಂಗಳೂರು ಮೇಸ್ತ್ರಿ, ಯಲ್ಲಪ್ಪ ಮ್ಯಾತ್ರಿ, ಶಶಿಕುಮಾರ್ ಮ್ಯಾತ್ರಿ ಕೊಪ್ಪರ, ಯೇಸು ಮನಗಾರ, ಪ್ರಕಾಶ್ ಮನಗಾರ, ನಾಗರಾಜ್ ಮ್ಯಾತ್ರಿ, ಬಸವಂತ ಮ್ಯಾತ್ರಿ, ನಾಗರಾಜ್ ಗುಡಿ ಮ್ಯಾತ್ರಿ , ಗಣೇಶ ಸುಲ್ತಾನಪುರು, ಸುನಿಲ್ ಸುಲ್ತಾನಪುರು, ಭೀಮರಾಜ್ ಮ್ಯಾತ್ರಿ, ರವಿ ಮ್ಯಾತ್ರಿ, ಇನ್ನಿತರ ಯುವನಾಯಕರ ನೇತೃತ್ವದಲ್ಲಿ ಜಯಂತಿಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು.

ಗ್ರಾಮದ ಯುವನಾಯಕರ ಶ್ರಮ ಈ ಬಾರಿ ಮೆರವಣಿಗೆಯು ಹಬ್ಬದ ವಾತಾವರಣವನ್ನು ಸೃಷ್ಟಿಸಿತ್ತು.

ಕೊಪ್ಪರ ಗ್ರಾಮದ ಯುವನಾಯಕರು ಒಂದಾಗಿ ಸೇರಿ, ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು ಈ ಅದ್ದೂರಿ ಮೆರವಣಿಗೆ ನೆರವೇರಲು ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಡಿ ಜೆ ಮೂಲಕ ಯುವಕರು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿದರು ಕೆಲ ಯುವಕರು ನೀಲಿ ಪೇಟ ತೊಟ್ಟು, ಘೋಷಣೆಗಳನ್ನು ಕೂಗುತ್ತಾ ಮಹನೀಯರಿಗೆ ಗೌರವ ಸಲ್ಲಿಸಲಾಯಿತು.

# ಬಿಜೆಪಿ ನಗರ ಮಂಡಲಕ್ಕೆ ಪದಾಧಿಕಾರಿಗಳ ನೇಮಕ

ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.19-**ಭಾರತೀಯ ಜನತಾ ಪಕ್ಷದ ರಾಯಚೂರು ನಗರ ಮಂಡಲದ ನೂತನ ಪದಾಧಿಕಾರಿಗಳ ಪಟ್ಟಿಯನ್ನು ನಗರ ಶಾಸಕರಾದ ಡಾ. ಶಿವರಾಜ ಪಾಟೀಲರು ಇಂದು ಬಿಡುಗಡೆ ಮಾಡಿದ್ದು,ಪದಾಧಿಕಾರಿಗಳ ವಿವರ ಈ ಕೆಳಗಿನಂತಿದೆ.

ಪಲಗುಲ ನಾಗರಾಜ,ಎ.ಚಂದ್ರಶೇಖರ,ರಾಮಚಂದ್ರ ಕಡಗೋಲ, ನಾಗವೇಣಿ ಸಾಹುಕಾರ,ಕು.ಸಂಗೀತಾ ಜಗತಾಪ,ವಿಜ್ಞಾನ ವೆಂಕಟೇಶ ಉಪಾಧ್ಯಕ್ಷರು,

ಪ್ರದೀಪ್ ಸಾನಬಾಳ,ಜೆ.ಎಂ. ಮೌನೇಶ್ ಪ್ರ .ಕಾರ್ಯದರ್ಶಿಗಳು,ಶಿವರೆಡ್ಡಿ,ವೀರಪ್ರಕಾಶ,ಸುಷ್ಮಾ,ಶಿವಲಕ್ಷ್ಮೀ,ರಾಧಾದೇವಿ, ವೇಣುಗೋಪಾಲ ಕಾರ್ಯದರ್ಶಿಗಳು, ಲಕ್ಷ್ಮೀಕಾಂತ್ ಜವಾರ ಕೋಶಾಧ್ಯಕ್ಷ,ವೀರೇಶ್ ತಾಲವಾಲ್ ಕಚೇರಿ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

ಹಿಂದುಳಿದ ಮೋರ್ಚಾ: ಯು. ಅಂಜನೇಯ ಅಧ್ಯಕ್ಷ,ಚಂದ್ರಶೇಖರ ಎಮ್,ಎಸ್.ನವೀನ್‌ಕುಮಾರರೆಡ್ಡಿ ಪ್ರ .ಕಾರ್ಯದರ್ಶಿಗಳು.ರೈತ ಮೋರ್ಚಾ: ಸುದರ್ಶನರೆಡ್ಡಿ ಅಧ್ಯಕ್ಷ,ಮಹಾದೇವ,ವಿ.ಆಂಜನೇಯ ಪ್ರ .ಕಾರ್ಯದರ್ಶಿಗಳು, ಯುವಮೋರ್ಚಾ: ರಾಜಶೇಖರರೆಡ್ಡಿ ಅಧ್ಯಕ್ಷ,ಲಕ್ಷ್ಮಣ,ಪ್ರಶಾಂತ್‌ಎಂ.ಪಾಟೀಲ್ ಪ್ರ .ಕಾರ್ಯದರ್ಶಿಗಳು.ಎಸ್.ಟಿ.

ಮೋರ್ಚಾ:ನರೇಂದ್ರ,ನಾಯಕ್ ಅಧ್ಯಕ್ಷ, ಎಸ್.ಹನುಮಂತು,ಸಿದ್ದೇಶ್ ಪಿ.ಪ್ರ .ಕಾರ್ಯದರ್ಶಿಗಳು,ಮಹಿಳಾ ಮೋರ್ಚಾ: ಅಶ್ವಿನಿ ಸಂತೋಷ ಕುಮಾರ ಅಧ್ಯಕ್ಷೆ,

ಅಕ್ಕಮ್ಮ, ಉಮಾದೇವಿ ಪ್ರ .ಕಾರ್ಯದರ್ಶಿಗಳಾಗಿ ನೇಮಕಗೊಂಡಿರುವುದಾಗಿ ಪಕ್ಷದ ನಗರ ಅಧ್ಯಕ್ಷರಾದ ಊಟ್ಕೂರು ರಾಘವೇಂದ್ರ, ಅವರು ತಿಳಿಸಿದ್ದಾರೆ.

# ಕಾರಂಜಾ ಸಂತ್ರಸ್ತ ರೈತರ ಹೋರಾಟಕ್ಕೆ ತಾರ್ಕಿಕ ಅಂತ್ಯ: ಶೀಘ್ರ, ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಭೆ



ಕನ್ನಡ ಮಾತೃ ಭೂಮಿ ವಾರ್ತೆ

**ಬೀದರ್, ಏ.19 –** ಕಾರಂಜಾ ಜಲಾಶಯದ ಮುಳುಗಡೆ ಸಂತ್ರಸ್ತ ರೈತರ ದಶಕಗಳ ಹೋರಾಟಕ್ಕೆ ತಾರ್ಕಿಕ ಅಂತ್ಯ ಸಿಗುವ ಭರವಸೆ ಮೂಡಿದ್ದು, ಈ ಕುರಿತು ಶೀಘ್ರದಲ್ಲೇ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆಯುವ ಸಾಧ್ಯತೆ ವ್ಯಕ್ತವಾಗಿದೆ.

ಈ ಹಿನ್ನೆಲೆಯಲ್ಲಿ 'ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿ'ಯ ಪದಾಧಿಕಾರಿಗಳ ಮಹತ್ವದ ಸಮಾಲೋಚನಾ ಸಭೆ ಶನಿವಾರ ನಗರದಲ್ಲಿ ನಡೆಯಿತು. ಸಭೆಯಲ್ಲಿ ಮುಂದಿನ ಹೋರಾಟದ ಕಾರ್ಯತಂತ್ರ, ಜಿಲ್ಲಾ ಉಸ್ತುವಾರಿ ಸಚಿವರ ಭೇಟಿಯ ರೂಪುರೇಷೆ ಹಾಗೂ ಬೆಂಗಳೂರಿನ ಸಭೆಗೆ ರೈತ ಪ್ರತಿನಿಧಿಗಳನ್ನು ಸಿದ್ಧಪಡಿಸುವ ಬಗ್ಗೆ ಚರ್ಚೆ ನಡೆಸಲಾಯಿತು.

ಇತ್ತೀಚೆಗೆ ಜಿಲ್ಲೆಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರಂಜಾ ಸಂತ್ರಸ್ತ ರೈತರ ಅಹವಾಲುಗಳನ್ನು ಆಲಿಸಿ, ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಉನ್ನತ ಮಟ್ಟದ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು.

ಸಭೆಯನ್ನುದ್ದೇಶಿಸಿ ಹಿರಿಯ ಹೋರಾಟಗಾರ ಲಕ್ಷ್ಮಣ ದಸ್ತಿ ಅವರು ಮಾತನಾಡಿ, ನಮ್ಮ ಸುದೀರ್ಘ ಹೋರಾಟಕ್ಕೆ ಈಗ ನ್ಯಾಯ ಸಿಗುವ ಆಶಾಭಾವನೆ ಮೂಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ವಿಶೇಷ ಕಾಳಜಿಯಿಂದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಸಾಧ್ಯವಾಯಿತು. ಮುಖ್ಯಮಂತ್ರಿಗಳು ಈಗಾಗಲೇ ರೈತ ಮುಖಂಡರೊಂದಿಗೆ ಎರಡು ಬಾರಿ ಸಭೆ ನಡೆಸಿರುವುದಾಗಿ ತಿಳಿಸಿದ್ದಾರೆ. ಶೀಘ್ರದಲ್ಲೇ ಸಚಿವರೊಂದಿಗೆ ಚರ್ಚಿಸಿ ರೈತ ಪ್ರತಿನಿಧಿಗಳನ್ನು ಬೆಂಗಳೂರಿಗೆ ಆಹ್ವಾನಿಸಿ ಅಂತಿಮ ಸಭೆ ನಡೆಸಲಾಗುವುದು ಎಂದರು.

ಇನ್ನೂ, ಸಭೆಯ ದಿನಾಂಕ ನಿಗದಿಪಡಿಸಲು ಹಾಗೂ ಮುಂದಿನ ಪ್ರಕ್ರಿಯೆಗಳ ಬಗ್ಗೆ ಚರ್ಚಿಸಲು ಸಮಿತಿ ಶೀಘ್ರದಲ್ಲೇ ಸಚಿವ ಈಶ್ವರ ಖಂಡ್ರೆ ಅವರನ್ನು ಭೇಟಿಯಾಗಲಿದ್ದು, ಅವರ ಮೂಲಕ ಬೆಂಗಳೂರಿನ ಸಭೆಯ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಸಮಿತಿಯ ಪ್ರಮುಖರಾದ ವಿನಯಕುಮಾರ್ ಮಾಳಗೆ, ರೋಹನ್ ಕುಮಾರ್, ಮಹೇಶ ಗೋರನಾಳ್ಕರ್, ರಾಜಪ್ಪ ಕಮಾಲ್ಪುರೆ, ರಾಜಶೇಖರ ಖೇಣಿ ರಂಜೋಳ, ಮಾದಪ್ಪ ಸಂಗೋಳಗಿ, ಸಂಗಾರೆಡ್ಡಿ, ರೇವಣಪ್ಪ, ಲಕ್ಷ್ಮೀ ಮಾದಪ್ಪ ಹಾಗೂ ವಿದ್ಯಾವತಿ ಸಂಗಾರೆಡ್ಡಿ ಸೇರಿದಂತೆ ಅನೇಕ ರೈತ ಮುಖಂಡರು ಮತ್ತು ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಮಹಿಳಾ ಮಸೂದೆ ಸೋಲಿಸಿ ಕಾಂಗ್ರೆಸ್ಸಿನಿಂದ ಸ್ವಾರ್ಥ ರಾಜಕಾರಣ: ಬಿಜೆಪಿ ವಕ್ತಾರೆ ಡಾ. ಸುಧಾ ಹಾಲ್ಕೈ ಕಿಡಿ

ಕನ್ನಡ ಮಾತೃ ಭೂಮಿ ವಾರ್ತೆ



**ಕಲಬುರ್ಗಿ, ಏ.19-** ನಿನ್ನೆ ಲೋಕಸಭೆಯಲ್ಲಿ ನಾರಿ ಶಕ್ತಿ ವಂದನ್ ಮಸೂದೆಯನ್ನು ಕಾಂಗ್ರೆಸ್ ಮತ್ತು ಮಿಕ್ಕ ವಿರೋಧ ಪಕ್ಷಗಳು ಸೋಲಿಸಿದವು. ನಿಜಕ್ಕೂ ಇದು ಒಂದು ರೀತಿ ಆಘಾತಕಾರಿ ವಿದ್ಯಮಾನ. ಕಾಂಗ್ರೆಸ್ ಪಕ್ಷದ ಸ್ವಾರ್ಥ ರಾಜಕಾರಣವೇ ಮಸೂದೆ ಸೋಲಿಗೆ ಕಾರಣ ಎಂದು ಬಿಜೆಪಿ ರಾಜ್ಯ ವಕ್ತಾರೆ ಡಾ. ಸುಧಾ ಆರ್. ಹಾಲ್ಕೈ ಅವರು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಸರ್ವಾಂಗೀಣ ವಿಕಾಸದ ಕಾರ್ಯದಲ್ಲಿ ಶೇ 50ಕ್ಕಿಂತ ಹೆಚ್ಚು ಇರುವಂತಹ ಮಹಿಳೆಯರನ್ನು ರಾಷ್ಟ್ರ ಕಾರ್ಯದ ಜತೆಗೆ, ರಾಷ್ಟ್ರ ನಿರ್ಮಾಣದ ಜತೆಗೆ ಸಹಭಾಗಿತ್ವದ ಮೂಲಕ ಬಹುದೊಡ್ಡದಾದ ಕೊಡುಗೆಯನ್ನು ನೀಡಬೇಕೆಂದು ಆದರಣೀಯ ಮೋದಿಯವರು ಸಂಕಲ್ಪ ಮಾಡಿದ್ದರು.

ಆದರೆ ಕಾಂಗ್ರೆಸ್ನ ಕುಟಿಲ ರಾಜಕಾರಣ, ಅವರ ಮುಖ್ಯ ಸಹೋದ್ಯೋಗಿಗಳು- ಟಿಎಂಸಿ, ಡಿಎಂಕೆ, ಆಪ್-ಎಲ್ಲರೂ ಸೇರಿಕೊಂಡು ಈ ಮಹಿಳಾ ಮಸೂದೆಯನ್ನು ಸೋಲಿಸಿ ತಮ್ಮ ದ್ವೇಷ ರಾಜಕಾರಣವನ್ನು ಇನ್ನೊಂದು ಮಜಲಿಗೆ ತೆಗೆದುಕೊಂಡು ಹೋಗಿದ್ದಾರೆ ಎಂದು ಕಿಡಿಕಾರಿದರು.

2011ರ ಜನಗಣತಿಯ ಆಧಾರದ ಮೇಲೆ ಮಹಿಳೆಯರಿಗೆ ಮುಂದಿನ ಲೋಕಸಭಾ ಚುನಾವಣೆಯ ಹೊತ್ತಿಗೆ ಪ್ರಾತಿನಿಧ್ಯವನ್ನು ಕಲ್ಪಿಸಬೇಕು ಎಂದು ಎಲ್ಲ ರಾಜ್ಯಗಳ ಸಂಸತ್ ಸ್ಥಾನಗಳಿಗೆ ಶೇ 50ರಷ್ಟು ಹೆಚ್ಚುವರಿ ಸ್ಥಾನಗಳನ್ನು ಸೇರಿಸಿ, ಎಲ್ಲರನ್ನೂ ಪಾಲ್ಗೊಳ್ಳುವಿಕೆಯ ಮೂಲಕ ಬಹುದೊಡ್ಡದಾದ ವೈಬ್ರೆಂಟ್ ಪ್ರಜಾಪ್ರಭುತ್ವವನ್ನು ಜಗತ್ತಿಗೆ ತೋರಿಸಿಕೊಡುವ ಅವಕಾಶ ಕಲ್ಪಿಸಲಾಗಿತ್ತು. ಆದರೆ ಕಾಂಗ್ರೆಸ್ ಮತ್ತು ಮಿಕ್ಕ ಪಕ್ಷಗಳ ಈ ಪ್ರತಿಗಾಮಿ ಧೋರಣೆಯಿಂದ ಇದಕ್ಕೆ ಹಿನ್ನಡೆಯಾಗಿದೆ. ಕುಂಟು ನೆಪವೊಡ್ಡಿ ಅನಾವಶ್ಯಕವಾಗಿ ಈ ಮಸೂದೆಯನ್ನು ಲೋಕಸಭೆಯಲ್ಲಿ ಸೋಲಿಸಿದರು ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಬಣ ರಾಜಕೀಯದಿಂದ ಹೊರಬರದೆ ಮಹಿಳೆಯರನ್ನು ಪ್ರತಿ ಸಂದರ್ಭದಲ್ಲೂ ಕೂಡ ಕಾಂಗ್ರೆಸ್ ತುಳಿಯುವಂತಹ ಕಾರ್ಯವನ್ನೇ ಮಾಡಿದೆ. ಮಹಿಳೆಯರ ವಿಚಾರದಲ್ಲಿ ಪ್ರತಿ ಸಂದರ್ಭದಲ್ಲೂ ಕಾಂಗ್ರೆಸ ಸ್ವಾರ್ಥ ರಾಜಕಾರಣವನ್ನೇ ಮಾಡಿದೆ. ಶಾ ಬಾನೊ ಪ್ರಕರಣ ಇರಬಹುದು, ಮುಸ್ಲಿಂ ಹೆಣ್ಣುಮಕ್ಕಳಿಗೆ ನ್ಯಾ ಒದಗಿಸುವ ತ್ರಿವಳಿ ತಲಾಖ್ ನಿಷೇಧದ ವಿಷಯದಲ್ಲಿ ಇರಬಹುದು, ಪ್ರತಿ ಸಂದರ್ಭದಲ್ಲೂ ಮಹಿಳೆಯರನ್ನು ಅವಮಾಣಿಸುವಂತಹ ಕೆಲಸವನ್ನೇ ಕಾಂಗ್ರೆಸ್ ಮಾಡಿಕೊಂಡು ಬಂದಿದೆ. ಅದು ಕಾಂಗ್ರೆಸ್‌ನ ರಾಜಕೀಯ ನೀತಿಯೇ ಆಗಿದೆ ಎಂದು ಟೀಕಿಸಿದ ಅವರು, ಒಂದು ಸುವರ್ಣಾವಕಾಶ ಲಭ್ಯವಾಗಿತ್ತು ಅದಕ್ಕೆ ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಕಾರಣದಿಂದ ತಾತ್ಕಾಲಿಕವಾಗಿ ಹಿನ್ನಡೆಯಾಗಿದೆ ಎಂದರು.

ಭಾರತೀಯ ಜನತಾ ಪಕ್ಷ ಬದ್ದತೆಯಿಂದ ಮಹಿಳೆಯರ ಹಕ್ಕುಗಳು ಮತ್ತು ಅವರ ಸಬಲೀಕರಣ ಹಾಗೂ ಅವರ ಪಾಲ್ಗೊಳ್ಳುವಿಕೆಯನ್ನು ಖಾತ್ರಿ ಮಾಡಿಕೊಂಡು ಮುಂದಿನ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಜತೆಗೆ ಒಯ್ಯುವಂತಹ ಕೆಲಸ ಮಾಡುತ್ತದೆ. ನಿನ್ನೆ ಆಗಿರುವ ಒಂದು ಹಿನ್ನಡೆ ಮುಂದಿನ ಗೆಲುವಿಗೆ ಸೋಪಾನವಾಗುತ್ತದೆ ಭವಿಷ್ಯದ ಭಾರತದ ನಿರ್ಮಾಣದಲ್ಲಿ ಮತ್ತಷ್ಟು ತೀವವಾಗಿ ಬದ್ಧತೆಯಿಂದ ಬಿಜೆಪಿ ಈ ಕಾರ್ಯವನ್ನು ಮಾಡುತ್ತದೆ. ಕಾಂಗ್ರೆಸ್ಸಿನ ಈ ಅನೀತಿ ರಾಜಕಾರಣವನ್ನು ಉಗ್ರವಾಗಿ ಖಂಡಿಸುವುದಾಗಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಚಂದಮ್ಮ ಪಾಟೀಲ್ ರೇವೂರ್, ಸಾವಿತ್ರಿ ಎಸ್. ಕುಳಗೇರಿ, ಗೌರಿ ಆರ್. ಚಿಚಿಕೋಟಿ, ಸವಿತಾ ಎಸ್. ಪಾಟೀಲ್, ಶೋಭಾ ಎಸ್. ಬಾಗೋಡಿ, ಸಪನಾ ಆರ್. ಮಂಗಲಗಿ, ಜ್ಯೋತಿ ಪಾಟೀಲ್, ನಂದಾ ವಿಜಯಕುಮಾರ್ ಖಾಬಾ, ಸುವರ್ಣಾ ವಾಡೆ ಮುಂತಾದವರು ಉಪಸ್ಥಿತರಿದ್ದರು.

## ಟೆಂಗಳಿಯಲ್ಲಿ ವಿಶ್ವ ಧ್ವನಿ ದಿನಾಚರಣೆ

# ಧ್ವನಿ ನಮ್ಮ ಬದುಕಿನ ಗುರುತು ಅಷ್ಟೇ ಅಲ್ಲ ನಮ್ಮ ಅಸ್ತಿತ್ವ: ವೀರೇಂದ್ರ ವಾಲಿ



ಕನ್ನಡ ಮಾತೃ ಭೂಮಿ ವಾರ್ತೆ

**ಕಾಳಗಿ, ಏ.19-** ಈ ಭೂಮಿಗೆ ಬಂದ ಮೊದಲ ಕ್ಷಣವೇ ಅತ್ತಿದ್ದು ಧ್ವನಿಯಿಂದ ವಾತಾವರಣ ಬೇರೆ ಬೇರೆ ಆದಾಗ ಅದನ್ನು ಭಾವನೆಯಿಂದ, ಪ್ರೀತಿಯಿಂದ, ಜ್ಞಾನದಿಂದ ತಿಳಿಸುವ ಪ್ರಕ್ರಿಯೆಯೆಂದು ಭೀಮೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿಯ ಅಧ್ಯಕ್ಷ ವಿರೇಂದ್ರ ವಾಲಿ ಅವರು ಹೇಳಿದರು.

ತಾಲ್ಲೂಕಿನ ಟೆಂಗಳಿಯಲ್ಲಿ ವಿಶ್ವ ಧ್ವನಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಧ್ವನಿಯಿಲ್ಲದೇ ಜೀವನ ಇಲ್ಲ ಎಂದರು. ಅಂಡಗಿ ಪ್ರತಿಷ್ಠಾನದ ಅಧ್ಯಕ್ಷ ಶಿವರಾಜ್ ಅಂಡಗಿ ಅವರು ಮಾತನಾಡಿ, ಕಲಾವಿದರಾದ ವಿಶ್ವನಾಥ ಬಾಳದೆ ಇವರು ಹಾಡಿದ ಧ್ವನಿಯೇ ಬೇರೆ ಹಿಂದೆ ಹಾಡಿದ ನಮ್ಮೆಲ್ಲರ ಧ್ವನಿಯೇ ಬೇರೆ ಸಂಗೀತಗಾರರ ಶ್ರೇಯಸ್ಸು, ಶಿಕ್ಷಕರ ಶೈಲಿ, ಭಾಷಣಕಾರರ ವೈಖರಿ ಇವೆಲ್ಲವೂ ಧ್ವನಿಯ ಮೇಲೆ ಅವಲಂಬಿತಗೊಂಡಿದೆ. ಅದರಿಂದಲೇ ವ್ಯಕ್ತಿತ್ವ ನಿರ್ಮಾಣ ಎಂಬುವುದು ಗ್ರಾಮೀಣ ಮಟ್ಟದಲ್ಲಿ ತಿಳಿಸುವ ಉದ್ದೇಶದಿಂದ ಭೀಮೇಶ್ವರ ದೇವಸ್ಥಾನದಲ್ಲಿ ಅಂಡಗಿ ಮನೆತನದ ವತಿಯಿಂದ ಹಮ್ಮಿಕೊಂಡ ಕಾರ್ತಿಕೋ ತ್ಸವ ನಿಮಿತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಹಾರ್ಮೋನಿಯಂ ಕಲಾವಿದರಾದ ವಿಶ್ವನಾಥ ಬಾಳದೆ, ತಬಲಾ ಕಲಾವಿದರಾದ ಚಂದ್ರಶೇಖರ ಎಲೇರಿ, ತಮ್ಮಲ್ಲಿರುವ ಕಲೆಯ ಅನುಭವವನ್ನು ತಮ್ಮದೇಯಾದ ಧ್ವನಿಯ ಮೂಲಕ ಮಾತನಾಡಿದರು. ರಾತ್ರಿ 10 ಗಂಟೆಯಿಂದ ಮಧ್ಯರಾತ್ರಿ 2 ಗಂಟೆಯವರೆಗೆ ಕಾರ್ತಿಕೋತ್ಸವ ನಿಮಿತ್ಯ ಹಮ್ಮಿಕೊಂಡ ಭಜನೆ ಮುಗಿಸಿ ಬೆಳಿಗ್ಗೆ 6 ಗಂಟೆಗೆ ಜಾತ್ರೆ ನಿಮಿತ್ಯ ಗ್ರಾಮದಿಂದ ತೆಗೆದುಕೊಂಡು ಹೋದ ತೇರಿನ ಕಳಸ, ಮಣಿ, ನಂದಿಕೋಲಗಳು ಹಾಗೂ ಫಲ್ಲಕ್ಕಿ ಇವುಗಳೆಲ್ಲವೂ ವಾದ್ಯಗಳೊಂದಿಗೆ ಮರಳಿ ಗ್ರಾಮಕ್ಕೆ ತರಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯರಾದ ವಿಶ್ವನಾಥ ಬಾಳದೆ, ಚಂದ್ರಶೇಖರ ಎಲೇರಿ, ಸಂಗಮೇಶ ಬೂದನಮಠ, ರಾಜು ಪಟೇದ, ಜಗು ಸ್ವಾಮಿ, ವಿನೋದಕುಮಾರ್ ಜನೇವರಿ, ಡಾ. ವಿವೇಕಾನಂದ ಬುಳ್ಳಾ, ಬಸವರಾಜ ಘಂಟಿ, ರೇವಣಸಿದ್ದಪ್ಪ ಕಲ್ಲಾ ಕಲ್ಲಹಿಪ್ಪರಗಿ, ಬಸವರಾಜ್ ಕಡಲಿ, ಶಿವಕುಮಾರ್ ನಾಗಶೆಟ್ಟಿ, ಶಿವ ತೆಲಗಾಣಿ, ಶರಣಪ್ಪ ಮಠಪತಿ, ಜಗನ್ನಾಥ ಮಠಪತಿ, ಮಲ್ಲಿಕಾರ್ಜುನ್ ಬಾರಿಗಿಡ ಮುಂತಾದವರು ಉಪಸ್ಥಿತರಿದ್ದರು.

# ಸಾಧನೆಯ ವಿದ್ಯಾರ್ಥಿಗಳಿಗೆ ಆರ್.ಎಂ.ಶಹಾ ಶಾಲೆಯಲ್ಲಿ ಸನ್ಮಾನ



ಕನ್ನಡ ಮಾತೃ ಭೂಮಿ ವಾರ್ತೆ

**ಇಂಡಿ,ಏ.19-**ನಗರದ ಆರ್.ಎಂ. ಶಹಾ ಪಬ್ಲಿಕ್ ಸ್ಕೂಲ್ ಸಿ.ಬಿ.ಎಸ್.ಇ 10 ನೇ ತರಗತಿಯ ವಾರ್ಷಿಕ (2026) ಪರೀಕ್ಷೆಯ ಫಲಿತಾಂಶದಲ್ಲಿ ಶಾಲೆಗೆ ಶೇ 100 ರಷ್ಟು ಫಲಿತಾಂಶ ತಂದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಅತ್ಯುತ್ತಮ ಫಲಿತಾಂಶ ತಂದುಕೊಡುವಲ್ಲಿ ಶ್ರಮಿಸಿದ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕುಮಾರಿ ಚಿನ್ಮಯ ಗಿರೀಶ ಕುಮಾನಿ 97.4% ಶಾಲೆಗೆ ಹಾಗೂ ತಾಲೂಕಿಗೆ ಪ್ರಥಮ ಸ್ಥಾನ , ಕುಮಾರ ಸಂದೀಪ ಮಳಸಿದ್ದಪ್ಪ ನಾಗೋಡ 96.% ದ್ವಿತಿಯ , ಕುಮಾರಿ ಸಾಕ್ಷೀ ಸಂಜೀವ ಮಂದೇವಾಲಿ 95.6% ತೃತೀಯ ಸ್ಥಾನ ಪಡೆದಿದ್ದಾರೆ..

ಕಾರ್ಯಕ್ರಮದಲ್ಲಿ ಶಾಲೆಗೆ ಹಾಗೂ ತಾಲೂಕಿಗೆ ಪ್ರಥಮ, ದ್ವಿತೀಯ, ತ್ರತೀಯಾ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಲಾ ಅಧ್ಯಕ್ಷ ಡಿ. ಆರ್ ಶಹಾ ರವರು ಮಾತನಾಡಿ ವಿದ್ಯಾರ್ಥಿಗಳಿಗೆ ಮುಂದಿನ ಭವಿಷ್ಯ ಉಜ್ವಲವಾಗಲಿ ಈಗ ಸಾಧನೆ ಮಾಡಿದಂತೆ ಮುಂದಿನ ದಿನಗಳಲ್ಲಿ ಸಾದನೆ ಮಾಡಿ ಕುಟುಂಬದ, ಊರಿನ ಮತ್ತು ಶಾಲೆಯ ಹೆಸರು ತರಬೇಕು ಎಂದು ಹಾರೈಸಿದರು.

ಶಾಲಾ ಶೈಕ್ಷಣಿಕ ಮಾರ್ಗದರ್ಶಕ ನಜೀರ ಹುಂಡೇಕರ ಮಾತನಾಡಿ ವಿದ್ಯಾರ್ಥಿಗಳ ಮುಂದಿನ ಶ್ಯಕ್ಷಣಿಕ ಜೀವನಕ್ಕೆ ಉಪಯುಕ್ತವಾದ ಮಾಹಿತಿಗಳನ್ನು ಹಂಚಿಕೊಂಡು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಶಾಲಾ ಆದಳಿತ ಮಂಡಳಿಯ ಸದಸ್ಯರು, ಪ್ರಾಚಾರ್ಯ ಹಾಗೂ ಶಿಕ್ಷಕ ಶಿಕ್ಷೇತರ ಸಿಬ್ಬಂದಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಅನಿಶಾ ಕೆ ನಿರೂಪಿಸಿದರೆ, ಅಲ್ಲಾಬಕ್ಷ ಉಕ್ಕಲಿ ಯವರು ವಂದಿಸಿರು

# ಡಾ.ರಾಜ್ ಕುಮಾರ ಅಭಿನಯದ ಸಿನಿಮಾ ಗೀತೆಗಳ ಗಾಯನಕ್ಕೆ ಸಾರ್ವಜನಿಕರಿಗೆ ಅವಕಾಶ

ಕನ್ನಡ ಮಾತೃ ಭೂಮಿ ವಾರ್ತೆ

**ವಿಜಯಪುರ,ಏ.19-**ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಏಪ್ರಿಲ್ 24ರಂದು ಬೆಳಿಗ್ಗೆ 9ಗಂಟೆಗೆ ವಿಜಯಪುರ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಆಯೋಜನೆ ಮಾಡಲಾದ ವರನಟ ಡಾ.ರಾಜಕುಮಾರ್ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ಡಾ.ರಾಜಕುಮಾರ್ ಅವರ ಚಲನಚಿತ್ರ ಗೀತೆಗಳ ಪ್ರಸ್ತುತಪಡಿಸಲು ಆಸಕ್ತ ಸಾರ್ವಜನಿಕರಿಗೆ ವಿಶೇಷ ಅವಕಾಶ ಕಲ್ಪಿಸಲಾಗಿದೆ. ವಯಸ್ಸಿನ ಮಿತಿ ಇರುವುದಿಲ್ಲ. ಪ್ರಸ್ತುತಿಯ ಸಮಯದ ಮಿತಿ ಇದೆ. ಒಬ್ಬರಿಗೆ ಒಂದು ಹಾಡಿಗೆ ಮಾತ್ರ ಅವಕಾಶವಿದ್ದು, ಆಯೋಜಕರ ನಿರ್ಣಯವೇ ಅಂತಿಮವಾಗಿದ್ದು,ತಮ್ಮ ಹೆಸರು ಮತ್ತು ಪೂರ್ಣ ವಿಳಾಸದೊಂದಿಗೆ ಇದೇ ಏಪ್ರೀಲ್ 22ರೊಳಗಾಗಿ ನೋಂದಾಯಿಸಿಕೊಳ್ಳಬಹುದಾಗಿದೆ.

ನೋಂದಣಿ ಕಡ್ಡಾಯವಾಗಿದೆ . ಕಾರ್ಯಕ್ರಮಕ್ಕೆ ಹೆಸರು ನೋಂದಾಯಿಸುವ ಹಾಡುಗಾರರು, ಕಲಾವಿದರು, ಸಾರ್ವಜನಿಕರು ಸ್ವಂತ ಖರ್ಚಿನಲ್ಲೇ ಕಾರ್ಯಕ್ರಮಕ್ಕೆ ಬರತಕ್ಕದ್ದು. ಕಾರ್ಯಕ್ರಮದಲ್ಲಿ ಪ್ರಮಾಣ ಪತ್ರವನ್ನು ಮಾತ್ರ ಗೌರವವಾಗಿ ವಿತರಿಸಲಾಗುವುದು. ಆಸಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯನ್ನು ಅಥವಾ ಮೊಬೈಲ್ ಸಂಖ್ಯೆ 9049499783 ಸಂಪರ್ಕಿಸಿ ಹೆಸರು ನೋಂದಾಯಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಏ.21ರಂದು ಶ್ರೀ ಆದಿ ಶಂಕರಾಚಾರ್ಯರ ಜಯಂತಿ

ಕನ್ನಡ ಮಾತೃ ಭೂಮಿ ವಾರ್ತೆ

**ವಿಜಯಪುರ,ಏ.19-** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಶ್ರೀ ಆದಿ ಶಂಕರಾಚಾರ್ಯರ ಜಯಂತಿಯನ್ನು ಏ.21 ರಂದು ಬೆಳಿಗ್ಗೆ 10ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಅವರು ಉದ್ಘಾಟಿಸು ವರು. ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ಕಾರ್ಯಕ್ರ ಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ, ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾದ ರವಿಕುಮಾರ ಎನ್, ನವದೆಹಲಿಯಲ್ಲಿನ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ2 ಹಾಗೂ ಶಾಸಕರಾದ ಪ್ರಕಾಶ ಬಿ. ಹುಕ್ಕೇರಿ, ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ನಿಯಮಿತದ ಅಧ್ಯಕ್ಷರೂ ಆದ ಶಾಸಕ ಅಪ್ಪಾಜಿ ಸಿ.ಎಸ್. ನಾಡಗೌಡ, ಸಂಸದರಾದ ರಮೇಶ ಜಗಜಿಣಗಿ ಹಾಗೂ ಸುಧಾ ಮೂರ್ತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಇಲಿಯಾಸ ಬೋರಾಮಣಿ ಅವರು ಭಾಗವಹಿಸಲಿದ್ದಾರೆ.

# ಬೀದರ್‌ನಲ್ಲಿ ಏಪ್ರಿಲ್ 21ರಂದು ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವ

ಕನ್ನಡ ಮಾತೃ ಭೂಮಿ ವಾರ್ತೆ



**ಬೀದರ್, ಏ.19-** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಇದೇ 21 ರಂದು ನಡೆಯುವ ಶ್ರೀ ಶಂಕರಾಚಾರ್ಯ ಜಯಂತೋತ್ಸವ ಕಾರ್ಯಕ್ರಮವನ್ನು ನಗರದ ಪೂಜ್ಯ ಚೆನ್ನಬಸವ ಪಟ್ಟದೇವರು ರಂಗಮಂದಿ ರದಲ್ಲಿ ಸಾಯಂಕಾಲ 4.30 ಗಂಟೆಗೆ ಜರುಗಲಿದೆ. ಕಾರ್ಯಕ್ರಮವನ್ನು ಜಿಲ್ಲಾಡಳಿತದೊಂದಿಗೆ ಸೇರಿ ಯಶಸ್ವಿಗೊಳಿಸಲು ನಗರದ ರಾಘವೇಂದ್ರ ಮಠದಲ್ಲಿ ಸಮಾಜದ ಹಿರಿಯರು, ಮುಖಂಡರ ನೇತೃತ್ವದಲ್ಲಿ ಪೂರ್ವಭಾವಿ ಸಭೆಯನ್ನು ಶುಕ್ರವಾರ ಸಂಜೆ ನಡೆಯಿತು.

ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ಅಧ್ಯಕ್ಷ ವೆಂಕಟ ರಾವ್ ಕುಲಕರ್ಣಿ ಅವರು ಮಾತನಾಡಿ, ಅಂದು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶಂಕರಾ ಚಾರ್ಯರ ಭಾವ ಚಿತ್ರದ ಪುಜೆ ನಡೆಯಲಿದ್ದು ಹೆಚ್ಚಿನ ಸಂಖೆಯಲ್ಲಿ ಸಮಾಜದ ಬಾಂದವರು ಭಾಗವಹಿಸಬೇಕು. ನಂತರ ಸಾಯಂಕಾಲ 4.30ಕ್ಕೆ ವೇದಿಕೆ ಕಾರ್ಯಕ್ರಮವು ನಗರದ ಚೆನ್ನಬಸವ ಪಟ್ಟದೇವರು ರಂಗಮಂದಿರಲ್ಲಿ ನಡೆಯಲಿದೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಂಘದ ಜಿಲ್ಲಾ ಅಧ್ಯಕ್ಷ ರಮೇಶ ಕುಲಕರ್ಣಿ ಅವರು ಮಾತನಾಡಿ, ಎಲ್ಲರ ಸಹಕಾರದೊಂದಿಗೆ ವಿವಿಧ ಸಂಘಟನೆಗಳ ಸಹಯೋಗದಿಂದ ಕಾರ್ಯಕ್ರಮ ಮಾಡಬೇಕು ಮತ್ತು ಕಾರ್ಯಕ್ರಮದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಾಗವಹಿಸಬೇಕು. ಅಲ್ಲದೇ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ನಡೆಯಬೇಕು ಎಂದು ಸಲಹೆ ನೀಡಿದರು.

ವೇದಿಕೆ ಕಾರ್ಯಕ್ರಮದ ನಂತರ ಸಮಾಜದ ವಿಧ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಭಜನೆ ಕಾರ್ಯಕ್ರಮ ಹಾಗೂ ಸಂಗೀತ ಕಾರ್ಯಕ್ರಮ ನಡೆಸಲು ತಿರ್ಮಾನಿಸಿ ಅದಕ್ಕೆ ಬೇಕಾದಂತಹ ಎಲ್ಲ ವ್ಯವಸ್ಥೆ ಮಾಡಲು ನಿರ್ಧರಿಸಲಾಯತು. ಸಭೆಯಲ್ಲಿ ಮಿಲಿಂದ ಆಚಾರ್ಯ, ಸತಿಷ ಕುಲಕರ್ಣಿ ಕೋಳಾರ್, ಉಪೇಂದ್ರ ದೇಶಪಾಂಡೆ, ಭೀಮಸೇನರಾವ ಕನ್ನಿಹಾಳ, ರಾಮರಾವ್ ಕುಲಕರ್ಣಿ, ಅಪ್ಪಾರಾವ್ ಸೌದಿ, ಸುನೀಲ್ ಕುಲಕರ್ಣಿ ಸೇರಿದಂತೆ ಅನೇಕರು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ಜಿಲ್ಲಾ ಸಂಚಾಲಕ ರಾಜೇಶ ಕುಲಕರ್ಣಿ ವಂದಿಸಿದರು.

ಶ್ರೀ ಶಂಕರಾಚಾರ್ಯ ಜಯಂತೋತ್ಸವದ ಪ್ರಯುಕ್ತ ವಿಪ್ರ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದ್ದು 21ರಂದು ನಗರದ ಚೆನ್ನ ಬಸವ ಪಟ್ಟದೇವರು ರಂಗ ಮಂದಿರ ಬೀದರನಲ್ಲಿ ನೆಡೆಯಲಿದೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇಕಡಾ 90ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಎಪ್ರಿಲ್ 20ರಂದು ಸಾಯಂಕಾಲ 6 ಗಂಟೆವರೆಗೆ ಸುನೀಲ್ ಕುಲಕರ್ಣಿ ಮೊ. ನಂ 886704 2222 ಸಂಪರ್ಕಿಸಿ ಮಾಹಿತಿ ನೀಡಬೇಕು ಎಂದು ಸಮಿತಿ ಮನವಿ ಮಾಡಿದೆ.

# ...ಮೊದಲನೇ ಪುಟದಿಂದ

## 40ಜನ ಶಾಸಕರು ಪಕ್ಷಾತೀತವಾಗಿ ಧ್ವನಿಯೆತ್ತಬೇಕಾದ ಅವಶ್ಯಕತೆ-ದದ್ದಲ್

ಪ್ರದೇಶವು ಶೇ.90 ರಷ್ಟು ಹಿಂದುಳಿದ ಪ್ರದೇಶವಾಗಿತ್ತು. ಆದರೆ ಇದೀಗ ಯಾವುದೇ ಅಭಿವೃದ್ಧಿ ಕಾಣದೇ ಶೇ.100 ರಷ್ಟು ಹಿಂದುಳಿದಿದೆ ಎಂದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹರವಿ ನಾಗನಗೌಡ ವಹಿಸಿದ್ದರು, ಪ್ರಮುಖರಾದ ಚಾಮರಸ ಮಾಲೀಪಾಟೀಲ್, ಲಕ್ಷ್ಮೀಪತಿ ಗಾಣದಾಳ, ಶಾರದಾ ಹುಲಿನಾಯಕ, ಸಲೀಂ ಅಹ್ಮದ್ ಪಾಷಾ, ಕಮಲಕುಮಾರ ಜೈನ್, ಬಿ.ಬಸವರಾಜ, ಜಂಬಣ್ಣ ಯಕ್ಲಾಸ್‌ಪೂರ, ವಿ.ಲಕ್ಷ್ಮೀರೆಡ್ಡಿ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನಗೌಡ ಸೇರಿ ಅನೇಕರಿದ್ದರು.

## ತಮಿಳನಾಡು ಚುನಾವಣೆ : ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲುವಿಗಾಗಿ ಎ.ವಸಂತಕುಮಾರ ಭರ್ಜರಿ ಪ್ರಚಾರ

ಗ್ರಾಮಗಳಿಗೆ ತೆರಳಿ ಪಕ್ಷದ ಅಭ್ಯರ್ಥಿಯೊಂದಿಗೆ ಮತಯಾಚಿಸಿದರು. ಜನರು ಅತ್ಯಂತ ಹೆಚ್ಚಿನ ಮಟ್ಟದಲ್ಲಿ ನಿರೀಕ್ಷೆಗೂ ಮೀರಿ ಬೆಂಬಲ ಸೂಚಿಸುತ್ತಿದ್ದಾರೆ ಎಂದು ಎಂಎಲ್‌ಸಿ ಎ. ವಸಂತ್ ಕುಮಾರ್ ತಿಳಿಸಿದರು.

ಈ ಸಂದರ್ಭದಲ್ಲಿ ಉಸಲಂಪಟ್ಟಿ ಕಾಂಗ್ರೆಸ್ ಅಭ್ಯರ್ಥಿ ಟಿ. ಸರವಣ ಕುಮಾರ್, ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಕ್ಷದ ನಾಯಕರು, ಮುಖಂಡರು, ಕಾರ್ಯಕರ್ತರು ಹಾಗು ರಾಯಚೂರಿನ ಕಾಂಗ್ರೆಸ್ ಪಕ್ಷದ ಮುಖಂಡರಾದ ರಾಮಕೃಷ್ಣ ನಾಯಕ, ಶ್ರೀನಿವಾಸ ಶಿಂದೆ ಹಾಗೂ ಇತರರು ಹಾಜರಿದ್ದರು.

## ಏ.21 ರಿಂದ 23 ವರೆಗೆ ಹೊಸೂರು ಗ್ರಾಮದಲ್ಲಿ ಸಂಗಮೇಶ್ವರ ದೇವಸ್ಥಾನದ ಶಿಲಾ ಮೂರ್ತಿಗಳ ಪ್ರತಿಷ್ಠಾಪನೆ-ಎಂ.ವಿರೂಪಾಕ್ಷಿ

ಕಾರ್ಯಕ್ರಮದಲ್ಲಿ ಕಿಲ್ಲೆ ಬೃಹನ್ಮಠದ ಶ್ರೀ ಶಾಂತಮಲ್ಲ ಶಿವಾಚಾರ್ಯರು, ಸೋಮವಾರಪೇಟೆ ಮಠದ ಶ್ರೀ ಅಭಿನವ ರಾಚೋಟಿ ವೀರ ಶಿವಾಚಾರ್ಯರು, ಮಂಗಳವಾರಪೇಟೆ ಮಠದ ಶ್ರೀ ವೀರಸಂಗಮೇಶ್ವರ ಶಿವಾಚಾರ್ಯರು, ಹೊಸೂರು ದರ್ಗಾ ಸಜ್ಜಾದೆ ಸೈಯದ್ ಚಾಂದಪೀರ್ ಖಾದ್ರಿ, ಫಾದರ್ ಎ.ಸಿಮೋನ್, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ರಾಜಯೋಗಿನಿ ಸೀತಕ್ಕ ಆಗಮಿಸಲಿದ್ದಾರೆ. ಸಣ್ಣ ನೀರಾವರಿ ಸಚಿವ ಎನ್.ಎಸ್ .ಬೋಸರಾಜ ಸೇರಿದಂತೆ ಎಲ್ಲಾ ಶಾಸಕರುರುಗಳು, ಗಣ್ಯರು ಎಲ್ಲಾ ಸಮಾಜದ ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಸುತ್ತಮುತ್ತಲಿನ 16 ಗ್ರಾಮಗಳ ಗ್ರಾಮಸ್ಥರು ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಬದಲ್ಲಿ ಶಿವಪ್ಪ ಮಾಲಿಪಾಟೀಲ್, ಸುರೇಶ, ಶಂಕರಪ್ಪ, ಶಿವಪ್ಪ, ಲಕ್ಷ್ಮಣ ,ಶಂಕರಪ್ಪ, ಹಾಜಿ , ಹನುಮಂತ ಸೇರಿ ಅನೇಕರಿದ್ದರು.

## ಭಾವಚಿತ್ರ ಮೆರವಣಿಗೆ ,ಬೈಕ್ ರ್ಯಾಲಿ, ದಾಸವಾಣಿ, ನೃತ್ಯ ಕಾರ್ಯಕ್ರಮ- ಪುರೊಷತ್ತಮ ಸಾವಿತ್ರಿ

23 ರಂದು ಬೆಳಿಗ್ಗೆ ವಿಶೇಷ ಪೂಜೆ, ಅಲಂಕಾರ, ಪಂಚಾಮೃತ ಅಭಿಷೇಕದೊಂದಿಗೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 6.15 ದಲ್ಲಿ ರಾಯಚೂರು ಶೇಷಗಿರಿದಾಸ್ ಇವರಿಂದ ದಾಸವಾಣಿ ಕಾರ್ಯಕ್ರಮ ನಡೆಯಲಿದೆ. ಏ.24 ರಂದು ಬೆಳಿಗ್ಗೆ 108 ಲೀಟರ್ ಕ್ಷೀರಾಭಿಷೇಕ, ವಾಸವಿ ಮಾತೆಗೆ ತುಲಾಭಾರ, ಸ್ಫೂರ್ತಿ ಡ್ಯಾನ್ಸ್ ಅಕಾಡೆಮಿಯಿಂದ ಡ್ಯಾನ್, ವಾಸವಿ ಮಾತೆಯ ಜೀವನ ಚರಿತ್ರೆ ನೃತ್ಯರೂಪಕ ಪ್ರದರ್ಶನ ನಡೆಯುತ್ತದೆ.

ಏ.25 ರಂದು ವಿಶೇಷ ಪೂಜೆಗಳೊಂದಿಎಗ ಡಾ. ಪ್ರೇಮಕುಮಾರ ಇವರಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯುತ್ತದೆ. ಮಾತೆಗೆ ಲಕ್ಷ್ಮ ಪುಷ್ಪಾರ್ಚನೆ, ಶ್ರೀ ವಾಸವಿ ದೇವಿಗೆ ತೆಪ್ಪೋತ್ಸವ, ವಾಹನ ಉತ್ಸಗಳು ನಡೆಯಲಿವೆ.

26 ರಂದು ವಾಸವಿ ಹೋಮ ,ಪೂರ್ಣಾಹುತಿ, ಸಾಮೂಹಿಕ ಕುಂಕುಮಾರ್ಚನೆ, ವಾಸವಿ ಚರಿತ್ರೆ ಪಾರಾಯಾಣ, ಬೆಳ್ಳಿ ರಥೋತ್ಸವ, ಸುವರ್ಣ ರಥೋತ್ಸವ, ತೊಟ್ಟಿಲು ಸೇವೆ, ಮಹಾ ಮಂಗಳಾರತಿ ಕಾರ್ಯಕ್ರಮಗಳು ನಡಯಲಿವೆ. ರವಿ ಕಿರಣ ಆಚಾರ ಉಡುಪಿ ಇವರಿಂದ ದರ್ಶನ ನೃತ್ಯ ಕಾರ್ಯಕ್ರಮಗಳುನಡೆಯಲಿವೆ ಎಂದರು.

ದೇವಸ್ಥಾನ ಸಮಿತಿ ಕಾರ್ಯದರ್ಶಿ ಪದ್ಮರಾಜ ಮಾತನಾಡಿ ವಾಸವಿ ಜಯಂತಿಗೆ ಸಮಾಜದ ಎಲ್ಲರನ್ನು ಭಾಗವಹಿಸುವಿಕೆ ಮನೆಮನೆಗಳಿಂದ ದೇಣಿಗೆ ಸಂಗ್ರಹಿಸಲಾಗಿದೆ. ಜಯಂತಿಗೆ ಎಲ್ಲರೂ ಸಹಕಾರ ನೀಡಿದ್ದಾರೆ. ಸಮಾಜ ಬಾಂಧವರು ಐದು ದಿನಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ಈ ಸಂದರ್ಬದಲ್ಲಿ ಜಗದೀಶ ಗುಪ್ತಾ, ಆರ್‌ಡಿಎ ಮಾಜಿ ಅಧ್ಯಕ್ಷ ಬಿ.ಗೋವಿಂದ, ಎಂ.ಆರ್.ದತ್ತಾತ್ರೇಯ,ದೇವನಪಲ್ಲಿ ವೆಂಕಣ್ಣ, ಕೆ.ಸಿ.ವೀರೇಶ, ನೆಲ್ಲೂರು ಶ್ರೀನಿವಾಸ ಚಾಗಿ ವೆಂಕಟೇಶ ಸೇರಿ ಅನೇಕರಿದ್ದರು.

## ಏ.20ರಂದು ಹೊಕ್ರಾಣಿ ಗ್ರಾಮದಲ್ಲಿ ಸಾಮೂಹಿಕ ಮದುವೆ, ಮತ್ತು ಆಧ್ಯಾತ್ಮಿಕ ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮ: ನರಸಣ್ಣ

ಮಹಾಸ್ವಾಮಿಗಳು, ಜಾಗೀರ ಜಾಡಲದಿನ್ನಿ ನೀಲಾಂಬಿಕ ಬಸವಯೋಗಾಶ್ರಮದ ವೀರಭದ್ರ ಮಹಾಸ್ವಾಮಿಗಳು, ಹುಂಡೆಕಲಾ ಡಾ.ಚನ್ನಬಸವ ಎಸ್, ಮಟಮಾರಿ ಮುಕ್ತಿಮಠದ ನಾಗಯ್ಯ ಸ್ವಾಮಿಗಳು, ಮಾಂಗಲ್ಯ ಪುರೋಹಿತ ಅಮರಯ್ಯ ಸ್ವಾಮಿ ಹಿರೇಮಠ, ಲೇಖಕರು ಮಮತಾ ಹಿರೇಮಠ ಇದ್ದರು. ಈ ಸಂದರ್ಭದಲ್ಲಿ ಶಿವು ಕುಮಾರ ವಕೀಲ, ಉದಯ ಕುಮಾರ, ನರಸಿಂಹಪ್ಪ ದೊರೆ, ಮಾರುತಿ ಕಲ್ಲೂರು ಇದ್ದರು.

## ತಮಿಳುನಾಡು: ಪಟಾಕಿ ಕಾರ್ಖಾನೆಯಲ್ಲಿ ಭಾರಿ ಸ್ಫೋಟ, 18 ಮಂದಿ ಸಾವು

ಪಟಾಕಿ ಕಾರ್ಖಾನೆ ಸ್ಫೋಟದಲ್ಲಿ ಅನೇಕ ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂಬ ಸುದ್ದಿ ತಿಳಿದು ತುಂಬಾ ನೋವಾಯಿತು. ಮೃತರಿಗೆ ನನ್ನ ಸಂತಾಪಗಳು. ಸಚಿವರಾದ ರಾಮಚಂದ್ರನ್ ಮತ್ತು ತಂಗಮ್ ತೆನ್ನರಸು ಅವರು ತಕ್ಷಣವೇ ಘಟನಾ ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯಾಚರಣೆಗಳನ್ನು ತ್ವರಿತಗೊಳಿಸಲು ಮತ್ತು ಮೇಲ್ವಿಚಾರಣೆ ನಡೆಸಲು ಮತ್ತು ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಲು ಸೂಚಿಸಿದ್ದೇನೆ. ಈ ವಿಷಯ ತಿಳಿದ ತಕ್ಷಣ, ನಾನು ಜಿಲ್ಲಾಧಿಕಾರಿಯ ಜೊತೆ ಮಾತನಾಡಿ, ಅಗತ್ಯವಿರುವ ಎಲ್ಲಾ ಸಹಾಯವನ್ನು ಮಾಡುವಂತೆ ತಿಳಿಸಿದ್ದೇನೆ' ಎಂದು ತಿಳಿಸಿದ್ದಾರೆ.

ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಸಂತಾಪ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಎಕ್ಸ್ ಪೋಸ್ಟ್‌ನಲ್ಲಿ, ತಮಿಳುನಾಡಿನ ವಿರುಧ್‌ನಗರ ಜಿಲ್ಲೆಯ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ ದುರಂತದಲ್ಲಿ ಸಂಭವಿಸಿದ ಜೀವಹಾನಿ ತೀವ್ರ ದುಃಖ ತಂದಿದೆ. ಮೃತರ ಕುಟುಂಬಗಳಿಗೆ ನನ್ನ ಸಂತಾಪಗಳು. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ.

ವಿರುಧ್‌ನಗರ ಬಳಿಯ ಪಟಾಕಿ ಕಾರ್ಖಾನೆಯಲ್ಲಿ ಸಂಭವಿಸಿದ ಅತ್ಯಂತ ಹೃದಯವಿದ್ರಾವಕ ದುರಂತ ಅಪಾರ ದುಃಖವನ್ನುಂಟುಮಾಡಿದೆ. ಈ ಅಪಘಾತದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಗಳಿಗೆ ನನ್ನ ಸಂತಾಪ. ಗಾಯಗೊಂಡವರೆಲ್ಲರೂ ಬೇಗನೆ ಚೇತರಿಸಿಕೊಳ್ಳಲಿ ಎಂದು ನಾನು ಪ್ರಾರ್ಥಿಸುತ್ತೇನೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಎಕ್ಸ್ ಪೋಸ್ಟ್ ಮಾಡಿದ್ದಾರೆ.

ತಮಿಳುನಾಡಿನ ವಿರುಧ್‌ನಗರ ಜಿಲ್ಲೆಯಲ್ಲಿ ಸಂಭವಿಸಿದ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ ದುಃಖ ತಂದಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನನ್ನ ಸಂತಾಪಗಳು. ಗಾಯಾಳುಗಳು ಆದಷ್ಟು ಬೇಗ ಗುಣಮುಖರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಎಕ್ಸ್ ಪೋಸ್ಟ್ ಮಾಡಿದ್ದಾರೆ.

## 10 ದಿನದಲ್ಲಿ ಕ್ರಮವಹಿಸದಿದ್ದರೆ ಹೊರಾಟ-ಕೆ.ಇ.ಕುಮಾರ

ಮುಂದಾಗಿದ್ದಾರೆ ಎಂದು ಆರೋಪಿಸಿದರು. 2017 ರಲ್ಲಿ ಹಿಂದಿನ ಜಿಲ್ಲಾಧಿಕಾರಿಗಳಾದ ಬಗಾದಿ ಗೌತಮ ಮತ್ತು ವೆಂಕಟೇಶ ಎಂಬುವವರು ಸಿಯಾತಲಾಬ್ ಬಡಾವಣೆಯಲ್ಲಿ ಅನಧಿಕೃವಾಗಿದ್ದ ಚಿತ್ರಮಂದಿರ ತೆರವುಗೊಳಿಸಲು ಆದೇಶ ನೀಡಿದ್ದರು. ತಹಸೀಲ್ದಾರ ಶಾಮನೂರು ಎಂಬುವರು ಸಹ ವರದಿಯನ್ನು ನೀಡಿದ್ದಾರೆ. ಆದರೆ ಅದೇ ಸ್ಥಳದಲ್ಲಿ ಮಾ ಆಶಾಪುರು ಕನ್ವಲ್ವೇಷನ್ ಹಾಲ್ ನಿರ್ಮಾಣಮಾಡಲಾಗಿದೆ. ಬಡವರು ಗುಡಿಸಲು ನಿರ್ಮಿಸಿದರೆ ತೆರವುಗೊಳಿಸುವ ಆಡಳಿತ ಅಕ್ರಮವಾಗಿ ಅತಿಕ್ರಮಿಸಿಕೊಳ್ಳುತ್ತಿದ್ದರೂ ತಡೆಯುತ್ತಿಲ್ಲ. ಸುಪ್ರಿಂಕೋರ್ಟ ಆದೇಶ ಪಾಲನೆ ಮಾಡುವದಾಗಿ ಹೇಳುವ ಅಧಿಕಾರಿಗಳು ಸರ್ಕಾರಿ ಭೂಮಿ ಕಬಳಿಸುತ್ತಿದ್ದರೂ ಕ್ರಮ ಮಾಡುತ್ತಿಲ್ಲ ಏಕೆ ಎಂದು ಪ್ರಶ್ನಿಸಿದರು. ಕೂಡಲೇ ಅತಿಕ್ರಮಿತ ಸ್ಥಳ ತೆರವುಗೊಳಿಸಿ ನಿವೇಶನ ರಹಿತರಿಗೆ ಹಂಚಿಕೆ ಮಾಡಬೇಕು. ಇಲ್ಲದೇ ಹೋದಲ್ಲಿ ನಿವಾಸಿಗಳೊಂದಿಗೆ ಪ್ರತಿಭಟನೆ ನಡೆಸುವದಾಗಿ ಹೇಳಿದರು.

ಈ ಸಂದರ್ಬದಲ್ಲಿ ಸೈಯದ್ ಶಂಶುದ್ದೀನ್, ಕಮಾಂಡರ ಗಂಗಾಧರ, ಬಿ.ಆಂಜಿನಯ್ಯ, ವಿಜಯಕುಮಾರಭೀಮಕಾರಿ, ಉರುಕುಂದ ಸಿಯಾತಲಾಬ್ ಇದ್ದರು.

# ಝುಂಜರವಾಡ ಸರ್ಕಾರಿ ಪ್ರೌಢಶಾಲೆಯಲ್ಲಿ ಅರ್ಥಪೂರ್ಣ ಬೀಳ್ಕೊಡುಗೆ ತಂದೆ-ತಾಯಿಗಳ ಪಾದಪೂಜೆ ನೆರವೇರಿಸಿ ಭಾವುಕರಾದ ವಿದ್ಯಾರ್ಥಿಗಳು

**ಚಿಕ್ಕೋಡಿ,ಏ.19**-ಅಥಣಿ ತಾಲೂಕಿನ ಝುಂಜರವಾಡ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಕೇವಲ ಭಾಷಣಗಳಿಗೆ ಸೀಮಿತವಾಗದೆ, ಅತ್ಯಂತ ಅರ್ಥಪೂರ್ಣ ಹಾಗೂ ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಯಿತು. ಶಾಲೆಯಿಂದ ನಿರ್ಗಮಿಸುತ್ತಿರುವ ವಿದ್ಯಾರ್ಥಿಗಳು ತಮ್ಮ ತಂದೆ-ತಾಯಿಗಳ ಪಾದಪೂಜೆ ಮಾಡುವ ಮೂಲಕ ಎಲ್ಲರ ಗಮನ ಸೆಳೆದರು.



ಮಕ್ಕಳು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿರುವ ಈ ಕಾಲಘಟ್ಟದಲ್ಲಿ, ಝುಂಜರವಾಡ ಶಾಲೆಯ ಮಕ್ಕಳು ವೇದಿಕೆ ಮುಂಭಾಗದಲ್ಲಿ ತಮ್ಮ ಪೋಷಕರನ್ನು ಕೂರಿಸಿ, ಭಕ್ತಿಯಿಂದ ಪಾದಗಳನ್ನು ತೊಳೆದು, ಹೂವಿನಿಂದ ಪೂಜಿಸಿ ನಮಸ್ಕರಿಸಿದರು. ಮಕ್ಕಳ ಈ ಭಕ್ತಿ ಮತ್ತು ಪ್ರೀತಿಯನ್ನು ಕಂಡ ಪೋಷಕರ ಕಣ್ಣುಗಳಲ್ಲಿ ಆನಂದಭಾಷ್ಪ ಜಿನುಗಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಲಕ್ಷ್ಮಣ ಸವದಿ ಹಾಗೂ ಜಮಖಂಡಿ ಓಲೇಮಠದ ಪೂಜ್ಯ ಆನಂದ ದೇವರು ಈ ಅಪರೂಪದ ದೃಶ್ಯವನ್ನು ಕಂಡು ಅತೀವ ಹರ್ಷ ವ್ಯಕ್ತಪಡಿಸಿದರು. ಇಂದಿನ ದಿನಗಳಲ್ಲಿ ಶಾಲೆಗಳಲ್ಲಿ ಕೇವಲ ಅಕ್ಷರ ಜ್ಞಾನವನ್ನು ಮಾತ್ರ ನೀಡಲಾಗುತ್ತಿದೆ. ಆದರೆ, ಝುಂಜರವಾಡ ಸರ್ಕಾರಿ ಶಾಲೆಯಲ್ಲಿ ಶಿಕ್ಷಣದ ಜೊತೆಗೆ ತಂದೆ-ತಾಯಿಯನ್ನು ಗೌರವಿಸುವಂತಹ ಸಂಸ್ಕಾರವನ್ನು ಬಿತ್ತಲಾಗುತ್ತಿದೆ. ಶಾಲೆಯ ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರ ಈ ಕಾರ್ಯ ನಿಜಕ್ಕೂ ಇತರ ಎಲ್ಲ ಶಾಲೆಗಳಿಗೂ ಮಾದರಿಯಾಗಿದೆ ಎಂದು ಗಣ್ಯರು ಮುಕ್ತಕಂಠದಿಂದ ಶ್ಲಾಘಿಸಿದರು.

ಕೇವಲ ನೃತ್ಯ, ಮನರಂಜನೆಗಳಿಗೆ ಸೀಮಿತವಾಗುತ್ತಿದ್ದ ಶಾಲಾ ವಾರ್ಷಿಕೋತ್ಸವ ಮತ್ತು ಬೀಳ್ಕೊಡುಗೆ ಸಮಾರಂಭಗಳು ಹೇಗಿರಬೇಕು ಎಂಬುದನ್ನು ಝುಂಜರವಾಡ ಗ್ರಾಮದ ಸರ್ಕಾರಿ ಪ್ರೌಢಶಾಲೆ ತೋರಿಸಿಕೊಟ್ಟಿದೆ. ಶಿಕ್ಷಣದ ಜೊತೆಗೆ ಸಂಸ್ಕಾರದ ಪಾಠವನ್ನು ಸಾರಿದ ಈ ಕಾರ್ಯಕ್ರಮ ನೆರೆದಿದ್ದ ಪ್ರತಿಯೊಬ್ಬರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಿತು.

ಇದೇ ಸಂದರ್ಭದಲ್ಲಿ ಜಮಖಂಡಿ ಓಲೇಮಠದ ಪೂಜ್ಯ ಆನಂದ ದೇವರು ಅವರ ಅರ್ಥಪೂರ್ಣ ಹಾಗೂ ಸ್ಫೂರ್ತಿದಾಯಕ ಆಶೀರ್ವಚನಕ್ಕೆ ಸಾಕ್ಷಿಯಾಯಿತು. ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರನ್ನು ಉದ್ದೇಶಿಸಿ ಮಾತನಾಡಿದ ಶ್ರೀಗಳು, ಇಂದಿನ ಶಿಕ್ಷಣ ವ್ಯವಸ್ಥೆ, ಕೃಷಿಯ ಮಹತ್ವ ಹಾಗೂ ಸಂಸ್ಕಾರದ ಕುರಿತು ಮಾರ್ಮಿಕವಾಗಿ ನುಡಿದರು.

ತಂತ್ರಜ್ಞಾನದ ಬೆಳವಣಿಗೆಯನ್ನು ಉಲ್ಲೇಖಿಸಿದ ಶ್ರೀಗಳು, ಇಂದು ಜಗತ್ತಿಗೆ 4ಎ, 5ಎ, 10ಎ ಕೊಡುವ ವಿಜ್ಞಾನಿಗಳಿದ್ದಾರೆ. ಆದರೆ, ನಮ್ಮೆಲ್ಲರ ಹೊಟ್ಟೆಗೆ ಟಿಗಂಜಿಟಿ ಕೊಡುವವನು ಕೇವಲ ರೈತ ಮಾತ್ರ. ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲಾ ಬಿಕ್ಕುವುದು ಎಂಬ ಸತ್ಯವನ್ನು ನಾವೆಲ್ಲರೂ ಅರಿಯಬೇಕು, ಎಂದು ರೈತರ ಮಹತ್ವವನ್ನು ಸಾರಿದರು.

ಕನ್ನಡ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಹುಮ್ಮಸ್ಸು ತುಂಬಿದ ಅವರು, ಕನ್ನಡ ಶಾಲೆಯಲ್ಲಿ ಓದಿದವರಿಗೆ ಭವಿಷ್ಯವಿಲ್ಲ ಎಂದು ಯಾರು ನಿಮ್ಮನ್ನು ಹೀಯಾಳಿಸುತ್ತಾರೋ, ಮುಂದೊಂದು ದಿನ ಅದೇ ಜನರ ಮುಂದೆ ನೀವು ಟಿಫಾರ್ಚುರ್ನಟಿ ಕಾರಿನಲ್ಲಿ ಓಡಾಡುವ ಮಟ್ಟಕ್ಕೆ ಬೆಳೆದು ಸಾಧನೆ ಮಾಡಬೇಕು. ಅವಮಾನಿಸಿದವರ ಮುಂದೆಯೇ ಸನ್ಮಾನ ಪಡೆಯುವಂತೆ ಎತ್ತರಕ್ಕೆ ಬೆಳೆಯಿರಿ, ಎಂದು ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.

ಇಂದಿನ ಪೋಷಕರ ವರ್ತನೆ ಕುರಿತು ಕಳವಳ ವ್ಯಕ್ತಪಡಿಸಿದ ಆನಂದ ದೇವರು, ಹಿಂದಿನ ಕಾಲದಲ್ಲಿ ತಾಯಂದಿರು ಜೋಗುಳ ಹಾಡಿ ಸಂಸ್ಕಾರ ಕಲಿಸುತ್ತಿದ್ದರು. ಆದರೆ ಇಂದು ಮಕ್ಕಳ ಅಳು ನಿಲ್ಲಿಸಲು ಮೊಬೈಲ್ ನೀಡಲಾಗುತ್ತಿದೆ. ಪೋಷಕರು ಮೊದಲು ತಮ್ಮ ಮೊಬೈಲ್ ಗೀಳು ಬಿಡಬೇಕು. ಮಕ್ಕಳಿಗೆ ತಾವು ಪಟ್ಟ ಕಷ್ಟದ ಅರಿವು ಮತ್ತು ಒಂದು ತುತ್ತು ಅನ್ನದ ಬೆಲೆಯನ್ನು ಕಲಿಸಬೇಕು ಎಂದರು. ಇದೇ ವೇಳೆ ತಮ್ಮ ಕಣ್ಣನ್ನೇ ದಾನವಾಗಿ ನೀಡಿದ್ದ ಅಂಥ ತಂದೆಯನ್ನು ಕಡೆಗಣಿಸಿದ ಮಗನ ಕಥೆಯನ್ನು ವಿವರಿಸಿ ತಂದೆ-ತಾಯಿಯ ತ್ಯಾಗವನ್ನು ಸ್ಮರಿಸಿದರು.

ಭಾಷೆಯ ಕುರಿತು ಮಾತನಾಡುತ್ತಾ, ಇಂಗ್ಲಿಷ್ ಭಾಷೆ ಕಲಿಯುವುದು ಇಂದಿನ ಅಗತ್ಯ, ಅದು ನಮ್ಮ ಮನೆಗೆ ಕಿಟಕಿ ಇದ್ದಂತೆ. ಆದರೆ, ಮಾತೃಭಾಷೆ ಕನ್ನಡವೇ ನಮ್ಮ ಮನೆಯ ಹೆಬ್ಬಾಗಿಲಾಗಿರಬೇಕು, ಎಂದು ಸ್ಪಷ್ಟಪಡಿಸಿದರು.

ಝುಂಜರವಾಡ ಶಾಲೆಯ ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಕೇವಲ ಸಂಬಳಕ್ಕಾಗಿ ಕೆಲಸ ಮಾಡದೆ, ಮನೆಮನೆಗೆ ತೆರಳಿ ಮಕ್ಕಳನ್ನು ಓದಿಸುವ ಕಾಳಜಿ ತೋರುತ್ತಿರುವುದಕ್ಕೆ ತೀವ್ರ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ, ಶಾಸಕ ಲಕ್ಷ್ಮಣ ಸವದಿ ಅವರ ಅಭಿವೃದ್ಧಿ ಕಾರ್ಯಗಳನ್ನು ಶ್ಲಾಘಿಸಿದ ಶ್ರೀಗಳು, ಬಡತನದ ಹಿನ್ನೆಲೆಯಿಂದ ಬಂದು ಅತ್ಯುನ್ನತ ಮಟ್ಟಕ್ಕೆ ಬೆಳೆದಿರುವ ಶಾಸಕ ಲಕ್ಷ್ಮಣ ಸವದಿ ಅವರು ರಾಜ್ಯದ ಇತರ ಎಲ್ಲ ಶಾಸಕರಿಗೆ ಒಂದು ಟಿಮೆನು ಕಾರ್ಡ್‌ಟಿ (ಮಾದರಿ) ಇದ್ದಂತೆ, ಎಂದು ಬಣ್ಣಿಸಿದರು.

ಇಂದಿನ ಯುವಕರು ಚಿಕ್ಕ ವಯಸ್ಸಿನಲ್ಲೇ ದುಶ್ಚಟಗಳಿಗೆ ಬಲಿಯಾಗದೆ, ಭಗತ್ ಸಿಂಗ್‌ರಂತಹ ದೇಶಪ್ರೇಮಿಗಳಾಗಿ ರೂಪುಗೊಳ್ಳಬೇಕು ಎಂದು ಕರೆ ನೀಡಿದ ಶ್ರೀಗಳು, ಕಾರ್ಯಕ್ರಮದಲ್ಲಿ ನೆರೆದಿದ್ದ ಭಕ್ತಸಾಗರವನ್ನು ಮುಂಬರುವ ಜಮಖಂಡಿ ಓಲೇಮಠದ ಜಾತ್ರೆಗೆ ಆಹ್ವಾನಿಸಿದರು.

ನಂತರ ಮಾತನಾಡಿದ ಶಾಸಕ ಲಕ್ಷ್ಮಣ ಸವದಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣದ ಜೊತೆಗೆ ಸಂಸ್ಕಾರದ ಅಗತ್ಯತೆ ಹಾಗೂ ಕೃಷಿಯ ಪ್ರಾಮುಖ್ಯತೆಯ ಕುರಿತು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಕಿವಿಮಾತು ಹೇಳಿದರು.

ಗ್ರಾಮದ ಎಸ್‌ಡಿಎಂಸಿ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ) ಸದಸ್ಯರ ಕಾಳಜಿಯನ್ನು ಮುಕ್ತಕಂಠದಿಂದ ಹೊಗಳಿದ ಶಾಸಕರು, ರಾತ್ರಿ ವೇಳೆ ಮನೆಮನೆಗೆ ತೆರಳಿ ಟಿವಿಗಳನ್ನು ಬಂದ್ ಮಾಡಿಸುವ ಹಾಗೂ ಮುಂಜಾನೆ ಮಕ್ಕಳನ್ನು ಎಬ್ಬಿಸಿ ಓದಿಗೆ ಪ್ರೇರೇಪಿಸುವ ಎಸ್‌ಡಿಎಂಸಿ ಸದಸ್ಯರ ಕಾರ್ಯ ಬೇರೆಲ್ಲಾ ಶಾಲೆಗಳಿಗೆ ಮಾದರಿಯಾಗಿದೆ. ಇಂತಹ ಶಾಲೆಯ ಕಾರ್ಯಕ್ರಮಕ್ಕೆ ಬಾರದೇ ಇದ್ದರೆ ಬಹುತೇಕ ತಪ್ಪಾಗುತ್ತಿತ್ತು, ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದಿನ ದಿನಮಾನಗಳಲ್ಲಿ ಕೇವಲ ಶಿಕ್ಷಣ ನೀಡಲಾಗುತ್ತಿದೆಯೇ ಹೊರತು ಸಂಸ್ಕಾರ ಕೊಡುವುದು ಕಡಿಮೆಯಾಗುತ್ತಿದೆ. ಆದರೆ, ಝುಂಜರವಾಡ ಶಾಲೆಯಲ್ಲಿ ಮಕ್ಕಳಿಗೆ ತಂದೆ-ತಾಯಿಗಳ ಪಾದಪೂಜೆ ಮಾಡಿಸುವಂತಹ ಉತ್ತಮ ಸಂಸ್ಕಾರವನ್ನು ಕಲಿಸುತ್ತಿರುವುದು ಅತ್ಯಂತ ಶ್ಲಾಘನೀಯ ಕಾರ್ಯ ಎಂದು ಶಾಸಕರು ಹರ್ಷ ವ್ಯಕ್ತಪಡಿಸಿದರು.

ತಮ್ಮ ಭಾಷಣದಲ್ಲಿ ಪ್ರಾಮಾಣಿಕ ಅಧಿಕಾರಿಯೊಬ್ಬರ ಕಥೆಯನ್ನು ಉದಾಹರಿಸಿದ ಅವರು, ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ, ಉತ್ತಮ ಶಿಕ್ಷಣ ನೀಡಿ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡುವುದು ಇಂದಿನ ಅತ್ಯಗತ್ಯ. ತಮ್ಮೆಲ್ಲಾ ದುಡಿಮೆಯನ್ನೂ ತ್ಯಾಗ ಮಾಡಿ ಮಕ್ಕಳನ್ನು ವಿದೇಶದಲ್ಲಿ ಉನ್ನತ ಹುದ್ದೆಗೇರಿಸಿದ ಆ ಅಧಿಕಾರಿಯ ಆದರ್ಶ ಎಲ್ಲರಿಗೂ ಮಾದರಿಯಾಗಬೇಕು, ಎಂದು ನೆರೆದಿದ್ದ ಪೋಷಕರಿಗೆ ತಿಳಿಸಿದರು.

ಕೇವಲ ನೌಕರಿ ಮಾಡುವುದೇ ಜೀವನದ ಅಂತಿಮ ಗುರಿಯಾಗಬಾರದು. ನಮ್ಮ ನೆಲ, ಜಲದೊಂದಿಗೆ ಬೆರೆತು ಕೃಷಿಗೂ ಸಮಾನ ಪ್ರಾಮುಖ್ಯತೆ ನೀಡಬೇಕು ಎಂದು ಕರೆ ನೀಡಿದ ಅವರು, ಮುಂಬರುವ ದಿನಗಳಲ್ಲಿ ಕೃತಕ ಬುದ್ಧಿಮತ್ತೆ (ಅಐ) ತಂತ್ರಜ್ಞಾನದಿಂದ ಉದ್ಯೋಗ ಹಾಗೂ ಬದುಕಿನ ಮೇಲೆ ಎದುರಾಗಬಹುದಾದ ಗಂಡಾಂತರಗಳು ಹಾಗೂ ಸವಾಲುಗಳ ಬಗ್ಗೆಯೂ ಸಾರ್ವಜನಿಕರನ್ನು ಎಚ್ಚರಿಸಿದರು.


ಉತ್ತಮ ಸಮಾಜ ನಿರ್ಮಾಣದಲ್ಲಿ ತಂದೆ, ತಾಯಿ ಮತ್ತು ವಿದ್ಯೆ ಕಲಿಸಿದ ಗುರುವಿನ ಪಾತ್ರ ಅತ್ಯಂತ ಮಹತ್ವದ್ದು ಎಂಬುದನ್ನು ಅವರು ತಮ್ಮ ಭಾಷಣದ ಮೂಲಕ ಮತ್ತೊಮ್ಮೆ ನೆನಪಿಸಿದರು.

# ಚಿಕ್ಕಮಗಳೂರು: ಈಜಲು ತೆರಳಿ ನಾಪತ್ತೆಯಾಗಿದ್ದ ಯುವಕನ ಶವ ಪತ್ತೆ, ಕೃಷಿ ಹೊಂಡದಲ್ಲಿ ಮತ್ತಿಬ್ಬರು ನೀರುಪಾಲು

**ಚಿಕ್ಕಮಗಳೂರು,ಏ.19**-ಕಾಫಿನಾಡು ಚಿಕ್ಕಮಗಳೂರಿನಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ಧಗೆ ಹೆಚ್ಚಾಗುತ್ತಿದೆ. ಬಿಸಿಲಿನ ಎಫೆಕ್ಟ್ ಹೆಚ್ಚಾಗಿರುವ ಕಾರಣ ನದಿ, ಕೃಷಿ ಹೊಂಡಗಳಲ್ಲಿ ಯುವಕರು ಈಜಲು ಹೋಗುತ್ತಿದ್ದಾರೆ. ಹೀಗೆ ಹೋದವರು ಅನಾಹುತಗಳಲ್ಲಿ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದೇ ರೀತಿ ನಿನ್ನೆ ಎನ್. ಆರ್. ಪುರ ತಾಲೂಕಿನ ಸಿದ್ದರಾಮಯ್ಯ ಸೇತುವೆ ಬಳಿ ಈಜಲು ತೆರಳಿ ನಾಪತ್ತೆಯಾಗಿದ್ದ ಯುವಕನ ಮೃತದೇಹ ಪತ್ತೆಯಾಗಿದೆ. ಮೃತ ಯುವಕನನ್ನು ನಿತಿನ್(34) ಎಂದು ಗುರುತಿಸಲಾಗಿದೆ.

ಇದೇ ರೀತಿ ಇಂದು ಕೃಷಿ ಹೊಂಡದಲ್ಲಿ ಈಜಲು ತೆರಳಿದ್ದ ಇಬ್ಬರು ಕಾರ್ಮಿಕರು ನಾಪತ್ತೆಯಾಗಿರುವ ಘಟನೆ ತಾಲೂಕಿನ ಬನ್ನೂರಿನಲ್ಲಿ ನಡೆದಿದೆ. ಅವರನ್ನು ರಮೇಶ್ (27) ಮಹೇಶ್ (34) ಎಂದು ಗುರುತಿಸಲಾಗಿದೆ. ಬಿಸಿಲಿನ ಧಗೆ ಹೆಚ್ಚು ಇದ್ದ ಕಾರಣ ಇಬ್ಬರು ಕಾರ್ಮಿಕರು ಈಜಲು ತೆರಳಿದ್ದರು. ನಾಪತ್ತೆಯಾದ ಬಳಿಕ ಕೃಷಿ ಹೊಂಡದ ಸಮೀಪ ಇಬ್ಬರ ಚಪ್ಪಲಿ ಪತ್ತೆಯಾಗಿದೆ.

ಇವರಿಬ್ಬರು ಕೊಪ್ಪ ತಾಲೂಕಿನ ಜಯಪುರ ಮೂಲದ ಕಾರ್ಮಿಕರು. ಬಿಳಗಿರಿ ಎಸ್ಟೇಟ್ ಬಳಿ ಇಬ್ಬರು ಕಾರ್ಮಿಕರು ಕೆಲ ದಿನಗಳಿಂದ ಕೆಲಸ ಮಾಡುತ್ತಿದ್ದರು. ಅಗ್ನಿಶಾಮಕ ದಳ ಶೋಧ ಕಾರ್ಯಾಚರಣೆ ಮುಂದುವರೆಸಿದೆ.



ನೀರಿನಲ್ಲಿ ಮುಳುಗಿ ಅಪ್ರಾಪ್ತ ಸಾವು (ಉಳ್ಳಾಲ) : ಕೈ ಕಾಲು ತೊಳೆಯಲು ಕೊಳವೆಗೆ ಇಳಿದ ಅಪ್ರಾಪ್ತನೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಕೊಣಾಜೆ ಪೊಲೀಸ್ ಠಾಣಾ ವ್ಯಾಪ್ತಿಯ ಅಂಬ್ಲಮೊಗರು ಝುರಿ ಎಂಬಲ್ಲಿ ತಡರಾತ್ರಿ ನಡೆದಿದೆ. ಇಲ್ಲಿನ ನಿವಾಸಿ ಶಿವರಾಮ ಎಂಬುವರ ಪುತ್ರ ಸೃಜನ್ (17) ಮೃತ ಬಾಲಕ. ಶನಿವಾರ ಮಧ್ಯಾಹ್ನದ ಹೊತ್ತಿಗೆ ನಾಲ್ವರು ಗೆಳೆಯರು ಅಂಬ್ಲಮೊಗರು ಝುರಿ ಎಂಬಲ್ಲಿ ಮೀನು ಹಿಡಿಯಲು ತೆರಳಿದ್ದರು. ಮೀನು ಹಿಡಿದ ನಂತರ ನಾಲ್ವರು ಸಮೀಪದಲ್ಲೇ ಇರುವ ಇಟ್ಟಿಗೆಗೆ ಮಣ್ಣು ತೆಗೆಯಲೆಂದು ಇಡಲಾದ ನೀರು ತುಂಬಿದ ಪಾಯದಲ್ಲಿ ಕೈ ಕಾಲು ತೊಳೆಯಲು ಇಳಿದಿದ್ದರು. ಅಲ್ಲಿ ಸೃಜನ್ ಕೆಳಕ್ಕೆ ತೆರಳಿ ಕೈ ಕಾಲು ತೊಳೆಯುತ್ತಿದ್ದಂತೆ ಆಯತಪ್ಪಿ ನೀರಿನಲ್ಲಿ ಮುಳುಗಿದ್ದಾನೆ. ಗೆಳೆಯನ ಪೈಕಿ ಓರ್ವ ಕೈಯಿಂದ ಹಿಡಿಯಲು ಯತ್ನಿಸಿದರೂ ಹಿಡಿಯುವುದು ಸಾಧ್ಯವಾಗಿಲ್ಲ. ಆತನೂ ಬೀಳುವ ಹಂತದಲ್ಲಿದ್ದರಿಂದಾಗಿ ತಕ್ಷಣವೇ ಆತನನ್ನು ಇತರರು ಕೈ ಹಿಡಿದು ಎಳೆದು ರಕ್ಷಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಗಾಬರಿಗೊಂಡ ಇತರೆ ಮೂವರು ಯಾರಿಗೂ ತಿಳಿಸದೆ ಮನೆಗೆ ತೆರಳಿದ್ದಾರೆ. ಸಂಜೆಯಾದ್ರೂ ಸೃಜನ್ ಮನೆಗೆ ಬಾರದಿರುವುದನ್ನು ಕಂಡು ಜತೆಗಿದ್ದವರನ್ನು ಪ್ರಶ್ನಿಸಿದಾಗ ಮೀನು ಹಿಡಿದ ನಂತರ ಕೈ ಕಾಲು ತೊಳೆದು ದನ ಹುಡುಕಾಟಕ್ಕೆ ತೆರಳಿದ್ದಾನೆ ಎಂದು ತಿಳಿಸಿದ್ದಾರೆ. ಬಳಿಕ ಮನೆಮಂದಿ ಹೆಚ್ಚು ಗದರಿಸಿದಾಗ ಸತ್ಯ ಸಂಗತಿ ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.ತಕ್ಷಣವೇ ಕೊಣಾಜೆ ಪೊಲೀಸರು, ಅಗ್ನಿ ಶಾಮಕ ದಳದವರಿಗೆ ಮಾಹಿತಿ ನೀಡಲಾಗಿದೆ. ಸ್ಥಳೀಯರು ಹಾಗೂ ಅಗ್ನಿ ಶಾಮಕ ದಳದ ಸಿಬ್ಬಂದಿ ಹುಡುಕಾಡಿ ರಾತ್ರಿ 11.30ರ ಸುಮಾರಿಗೆ ಮೃತದೇಹ ಪತ್ತೆ ಮಾಡಿದ್ದಾರೆ. ಈ ಬಗ್ಗೆ ಕೊಣಾಜೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಮೈಸೂರು : ಹಾದನೂರು ಗ್ರಾಮದ ಜಮೀನಿನಲ್ಲಿ ಕಾಣಿಸಿಕೊಂಡ ಹುಲಿ ಸೆರೆ

**ಮೈಸೂರು,ಏ.19**-ಸರಗೂರು ತಾಲೂಕಿನ ಹಾದ ನೂರು ಗ್ರಾಮದ ಜಮೀನಿನಲ್ಲಿ ಕಾಣಿಸಿಕೊಂ ಡಿದ್ದ ಹುಲಿಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದ್ದು, ಮೈಸೂರಿನ ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರ ಮಾಡಲಾಗಿದೆ.

ಎರಡು ದಿನಗಳ ಹಿಂದೆ ಹುಲಿಯು ಕಾಡಂಚಿನ ಜಮೀನಿನಲ್ಲಿ ಮೇಯುತ್ತಿದ್ದ ಹಸುಗಳ ಮೇಲೆ ದಾಳಿ ನಡೆಸಿ ಬಲಿ ತೆಗೆದುಕೊಳ್ಳುತ್ತಿದ್ದರಿಂದ ಜನ ಭಯಭೀತರಾಗಿದ್ದರು. ಈವರೆಗೆ ಹುಲಿ ಸುಮಾರು 15ಕ್ಕೂ ಹೆಚ್ಚು ಜಾನುವಾರುಗಳನ್ನು ತಿಂದು ತೇಗಿತ್ತು. ಶುಕ್ರವಾರ ಶುಂಠಿ ಕೆಲಸಕ್ಕೆ ಕೂಲಿ ಕಾರ್ಮಿಕರು ಹೋಗುತ್ತಿದ್ದಾಗ ಅವರಿಗೆ ಕಾಣಿಸಿಕೊಂಡು ಆತಂಕ ಮೂಡಿಸಿತ್ತು. ಇದಾದ ಬಳಿಕ ಗ್ರಾಮಸ್ಥರು ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಗಮನಕ್ಕೂ ತಂದಿದ್ದರು.

ಗ್ರಾಮದ ಸಮೀಪದಲ್ಲೇ ಹುಲಿ ಕಾಣಿಸಿಕೊಂಡಿದ್ದರಿಂದ ಜನ ಭಯಗೊಂಡು ಅರಣ್ಯ ಇಲಾಖೆ ಕೂಡಲೇ ಹುಲಿ ಸೆರೆಗೆ ಕ್ರಮವಹಿಸಬೇಕು ಎಂದು ಆಗ್ರಹಿಸಿದ್ದರು.

ಈ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿ ತಿರುಗಾಡಿದ ಹೆಜ್ಜೆ ಗುರುತುಗಳನ್ನು ಪರಿಶೀಲನೆ ನಡೆಸಿದ್ದರು. ನಂತರ ಡಿಸಿಎಫ್ ಪ್ರಭಾಕರನ್, ಎಸಿಎಫ್ ಪರಮೇಶ್ ಮಾರ್ಗದರ್ಶನದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಹುಲಿ ಸೆರೆ ಕಾರ್ಯಾಚರಣೆ ಕೈಗೊಂಡರು.

ಸಂಜೆ ಎರಡು ಸಾಕಾನೆಗಳ ಮೂಲಕ ಡ್ರೋನ್ ಕ್ಯಾಮರಾವನ್ನು ಬಳಸಿಕೊಂಡು ಕಾರ್ಯಾಚರಣೆ ನಡೆಸಿದ ಸಿಬ್ಬಂದಿ, ಶನಿವಾರ ರಾತ್ರಿ 9 ಕ್ಕೆ ಹುಲಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ, ಸುತ್ತಮುತ್ತಲಿನ ಜನತೆ ಆತಂಕದಿಂದ ದೂರವಾಗಿದ್ದಾರೆ.

8 ವರ್ಷದ ಹುಲಿಗೆ ಹಲ್ಲು ಮುರಿದಿದ್ದು, ಕಾಡಿನಲ್ಲಿ ಬೇಟೆಯಾಡಲು ಸಾಧ್ಯವಾಗದೇ ಸಾಕು ಪ್ರಾಣಿಗಳನ್ನು ತಿಂದು ಗ್ರಾಮದಲ್ಲಿ ಓಡಾಡುತ್ತಿತ್ತು ಅರಣ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಹೆಡಿಯಾಲ, ನುಗು, ಮೊಳೆಯೂರು ವಲಯದ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ಭಾಗಿಯಾಗಿದ್ದರು.

ಹುಲಿ ಸೆರೆಯಾದ ಊರಲ್ಲಿ ಮತ್ತೆರಡು ಹುಲಿ ಪ್ರತ್ಯಕ್ಷ (ಚಾಮರಾಜನಗರ): ಇತ್ತೀಚಿಗೆ ಗುಂಡ್ಲುಪೇಟೆ ತಾಲೂಕಿನ ಚೆನ್ನಮಲ್ಲಿಪುರ ಗ್ರಾಮದ ರೈತರ ಜಮೀನಿನ ಬಾಳೆತೋಟ ಹಾಗೂ ಆಸುಪಾಸಿನಲ್ಲಿ ಮರಿಯೊಟ್ಟಿಗೆ ತಾಯಿ ಹುಲಿ ವಾಸ್ತವ್ಯ ಹೂಡಿತ್ತು. ಇದರಿಂದಾಗಿ ಸುತ್ತಮುತ್ತಲಿನ ಗ್ರಾಮಗಳ ರೈತರಲ್ಲಿ ಆತಂಕ ಸೃಷ್ಟಿಯಾಗಿತ್ತು. ಹೀಗಾಗಿ, ಹುಲಿಗಳ ಚಲನವಲನದ ಮೇಲೆ ಅರಣ್ಯ ಇಲಾಖೆ ಡ್ರೋನ್ ಕ್ಯಾಮೆರಾ ಮೂಲಕ ನಿಗಾ ವಹಿಸಿತ್ತು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ಅರಣ್ಯ ವಲಯ ವ್ಯಾಪ್ತಿಯ ಚೆನ್ನಮಲ್ಲಿಪುರ ಗ್ರಾಮದ ರೈತ ನಾಗಪ್ಪ ಎಂಬವರ ಜಮೀನಿನಲ್ಲಿ ಅಂದಾಜು ಒಂದೂವರೆ ವರ್ಷದ ಗಂಡು ಹುಲಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿದು, ಮೈಸೂರಿನ ಕೂರ್ಗಳ್ಳಿಯ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿದ್ದರು. ಇದಾದ ಬಳಿಕ ಮರಿಯೊಂದಿಗೆ ತಾಯಿ ಹುಲಿ ಓಡಾಟ ನಡೆಸುತ್ತಿರುವ ದೃಶ್ಯ ಡ್ರೋನ್ ಕ್ಯಾಮರಾದಲ್ಲಿ ಸೆರೆಯಾಗಿತ್ತು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L